

# ಕನ್ನಡ

# ಸುಗಮಭಾರತಿ

## ಎಂಟನೆಯ ಇಯತ್ತೆ

Get More Learning Materials Here : CLICK HERE www.studentbro.in

# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

Get More Learning Materials Here : CLICK HERE www.studentbro.in

ಪ್ರಥಮಾವೃತ್ತಿ : 2018
ಪುನರ್ಮುದ್ರಣ : 2022

**ಕನ್ನಡ ಭಾಷಾ ಸಮಿತಿ :**

ಡಾ. ಕೆ.ಕೆ. ಪತ್ತಾರ, ಅಧ್ಯಕ್ಷ
ಶ್ರೀ. ಶಿವಬಾಳ ಕೆ. ಗೋಲಿ, ಸದಸ್ಯ
ಶ್ರೀ. ಹಣಮಂತ ಎಮ್. ಕುಂಭಾರ, ಸದಸ್ಯ
ಶ್ರೀಮತಿ. ಜಯದೇವಿ ಆಯ್. ಉಕ್ಕಲಿ, ಸದಸ್ಯೆ
ಡಾ. ಸದಾನಂದ ಎಂ. ಬಿಳ್ಳೂರ, ಸದಸ್ಯ- ಸಚಿವ

**ಕನ್ನಡ ಅಭ್ಯಾಸಗಟ ಸದಸ್ಯರು :**

ಶ್ರೀ. ಶ್ರೀಶೈಲ ಜಿ. ಅವಟಿ
ಶ್ರಿ. ಜಿ. ಡಿ. ಮೋರೆ

**ಸಂಯೋಜನ ಪ್ರಮುಖರು :**

ಡಾ. ಸದಾನಂದ ಎಂ ಬಿಳ್ಳೂರ,
ವಿಶೇಷಾಧಿಕಾರಿ ಕನ್ನಡ,
ಪಾಠ್ಯಪುಸ್ತಕ ಮಂಡಳ, 'ಬಾಲಭಾರತಿ', ಪುಣೆ-4
ಶ್ರೀ. ಆರ್. ಎಮ್. ಗಣಾಚಾರಿ, ವಿಷಯ
ಸಹಾಯಕ ಕನ್ನಡ, ಬಾಲಭಾರತಿ, ಪುಣೆ-4

**ಚಿತ್ರಕಾರ :**

ಶ್ರೀ. ಯಶವಂತ ದೇಶಮುಖ

**ಮುಖಪುಟ :**

ಶ್ರೀ. ರಾಜೇಂದ್ರ ಗಿರಿಧಾರಿ

**ಅಕ್ಷರ ಜೋಡಣೆ :**

ಕೇಸನ್ ಲ್ಯಾಂಗ್ವೇಜ್ ಬ್ಯೂರೋ

**ನಿರ್ಮಿತಿ :**

ಶ್ರೀ. ಸಚ್ಚಿತಾನಂದ ಆಫಳೆ. ಮುಖ್ಯ ನಿರ್ಮಿತಿ ಅಧಿಕಾರಿ
ಶ್ರೀ. ಸಂದೀಪ ಆಜಗಾಂವಕರ, ನಿರ್ಮಿತಿ ಅಧಿಕಾರಿ

**ಕಾಗದ :** 70 ಜಿ. ಎಸ್. ಎಮ್. ಕ್ರೀಮ್‌ವೋವ್ಹ್

**ಮುದ್ರಣಾದೇಶ :** N/PB/2022-23/Qty.

**ಮುದ್ರಕರು :** M/s

**ಪ್ರಕಾಶಕ :**

ಶ್ರೀ. ವಿವೇಕ ಗೋಸಾವಿ, ನಿಯಂತ್ರಕ,
ಪಾಠ್ಯಪುಸಕ್ತ ನಿರ್ಮಿತಿ ಮಂಡಳ, ಪ್ರಭಾದೇವಿ,
ಮುಂಬಯಿ - 25.

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 4

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

## ಪ್ರಸ್ತಾವನೆ

ಪ್ರೀತಿಯ ವಿದ್ಯಾರ್ಥಿ ಮಿತ್ರರೆ,

ತಮಗೆಲ್ಲರಿಗೂ ಎಂಟನೆಯ ಇಯತ್ತೆಯ ವರ್ಗದಲ್ಲಿ ಸ್ವಾಗತವಿದೆ. ಈ ಹಿಂದಿನ ವರ್ಗದಲ್ಲಿ ಕನ್ನಡ ಸುಗಮಭಾರತಿ ಈ ಪಠ್ಯಪುಸ್ತಕವನ್ನು ನೀವು ಅಭ್ಯಸಿಸಿದ್ದೀರಿ. ಎಂಟನೆಯ ಸುಗಮಭಾರತಿ ಈ ಪಠ್ಯಪುಸ್ತಕವನ್ನು ನಿಮ್ಮ ಕೈಯಲ್ಲಿಡಲು ಆನಂದವಾಗುತ್ತದೆ.

ಗೆಳೆಯರೆ, ಕನ್ನಡವು ನಮ್ಮ ಮಾತೃಭಾಷೆಯಾಗಿದೆ. ಇಂಗ್ಲಿಷ ಮತ್ತು ಮರಾಠಿ ಭಾಷೆಯ ಹೊರತು ಕನ್ನಡ ಭಾಷೆಯಲ್ಲಿ ಬರೆಯಲು, ಓದಲು, ಸಂವಾದಿಸಲು, ಪತ್ರ ವ್ಯವಹಾರ ಮಾಡಲು, ಶಬ್ದ ಸಂಪತ್ತು ಕೂಡ ಚೆನ್ನಾಗಿರಬೇಕು. ಈ ಪಠ್ಯಪುಸ್ತಕದಲ್ಲಿಯ ಕಥೆ, ಸಂವಾದ ಪಾಠ ಕವಿತೆ, ಗೀತೆಗಳನ್ನು ಓದಿ ನಿಮಗೆ ಹೊಸ ಹೊಸ ಶಬ್ದಗಳನ್ನು ಕಲಿಯಲು ಸಿಗುವದಿದೆ. ಈ ಪುಸ್ತಕವನ್ನು ಓದಿ ನಿಮಗೆ ಕನ್ನಡ ಭಾಷೆಯ ಅಭಿರುಚಿ ಹೆಚ್ಚಾಗಬಹುದು ಎಂದು ನಮಗೆ ಅನಿಸುತ್ತದೆ.

ಪಠ್ಯಪುಸ್ತಕದಲ್ಲಿ ಭಾಷಾ ಕೌಶಲ್ಯ ಹೆಚ್ಚೆಚ್ಚು ವಿಕಾಸ ಮಾಡುವ ದೃಷ್ಟಿಯಿಂದ ಹೊಸ ಸ್ವಾಧ್ಯಾಯ ಕೊಡಲಾಗಿದೆ. ಶೀರ್ಷಿಕೆಯಲ್ಲಿ ಕೊಟ್ಟ ವಿಷಯ ಮತ್ತು ಕೃತಿಯಿಂದ ನಿಮ್ಮಲ್ಲಿಯ ಭಾಷಾ ಕೌಶಲ್ಯಗಳ ವಿಕಾಸದ ಜೊತೆಗೆ ನಿರೀಕ್ಷಣ ಕ್ಷಮತೆ. ವಿಚಾರ ಕ್ಷಮತೆ ಮತ್ತು ಕೃತಿಶೀಲತೆ ಇವುಗಳಿಗೆ ಅವಕಾಶ ದೊರೆಯುವದಿದೆ. ನಿಮಗೆ ಹಿಡಿಸುವ ರೀತಿಯಲ್ಲಿ ವ್ಯಾಕರಣದ ಭಾಗವನ್ನು ಕೊಡಲಾಗಿದೆ.

ಕನ್ನಡ ಭಾಷೆಯನ್ನು ಕಲಿಯುವ ಪ್ರಕ್ರಿಯೆಯು ಆನಂದದಾಯಕ ವಾಗಬೇಕು ಮತ್ತು ಸ್ವಯಂ ಅಧ್ಯಯನಕ್ಕೆ ಚಾಲನೆ ದೊರಕಬೇಕೆಂಬ ದೃಷ್ಟಿಯಿಂದ ಈ ಪುಸ್ತಕವನ್ನು ಪರಿಪೂರ್ಣಗೊಳಿಸುವ ಪ್ರಯತ್ನ ಮಾಡಲಾಗಿದೆ. ಕನ್ನಡ ಸುಗಮಭಾರತಿ ಎಂಟನೆಯ ಇಯತ್ತೆಯ ಈ ಪಠ್ಯಪುಸ್ತಕವು ನಿಮ್ಮೆಲ್ಲರಿಗೂ ನಿಶ್ಚಿತವಾಗಿ ಹಿಡಿಸಬಹುದೆಂಬ ವಿಶ್ವಾಸ ನಮಗಿದೆ.

ಪುಣೆ
ದಿನಾಂಕ: 18 ಎಪ್ರಿಲ 2018, ಅಕ್ಷಯ ತೃತೀಯಾ
ಭಾರತೀಯ ಸೌರ ದಿನಾಂಕ: 28 ಚೈತ್ರ 1940

(ಡಾ. ಸುನಿಲ ಮಗರ)
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ
ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

Get More Learning Materials Here : CLICK HERE www.studentbro.in

ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ 2016/(ಪ್ರ.ಕ್ರ. 43/16) ಎಸ್‌ಡಿ-4 ದಿನಾಂಕ 25.4.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯು ದಿನಾಂಕ 29.12.2017 ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ಕ್ರಿ.ಶ. 2018-19 ಈ ಶೈಕ್ಷಣಿಕ ವರ್ಷದಿಂದ ನಿರ್ಧರಿಸಲು ಮಾನ್ಯತೆ ನೀಡಲಾಗಿದೆ.

## ಕನ್ನಡ

# ಸುಗಮಭಾರತಿ

## ಎಂಟನೆಯ ಇಯತ್ತೆ

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-4

IJFQPE

ತಮ್ಮ ಸ್ಮಾರ್ಟ್‌ಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R. Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವ Q.R. Codeದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

Get More Learning Materials Here : CLICK HERE www.studentbro.in

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು
ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

Get More Learning Materials Here : CLICK HERE www.studentbro.in

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

Get More Learning Materials Here : CLICK HERE www.studentbro.in

# ಪರಿವಿಡಿ


| ಅ.ಕ್ರ. | ಪಾಠಗಳ ಹೆಸರು | ಕವಿ / ಲೇಖಕರು | ಪುಟ ಸಂಖ್ಯೆ |
|---|---|---|---|
| 1. | ಚನ್ನಮಣೆ | | 1 |
| 2. | ನಮ್ಮೂರೇ ಚೆಂದ | | 6 |
| 3. | ಶ್ರೇಷ್ಠತೆಯ ಲಕ್ಷಣಗಳು | | 9 |
| 4. | ಸಸ್ಯಗಳ ಸಂತಾನ ಪ್ರೇಮ | | 13 |
| 5. | ಕುದುರೆಯೂ, ಸರದಾರನ ಗಡ್ಡವೂ | | 16 |
| 6. | ಚಾಂದಬೀಬಿ | | 21 |
| 7. | ಶಿಕ್ಷಕರ ದಿನಾಚರಣೆ | | 25 |
| 8. | ನಿಜವಾದ ದಾನಶೀಲತೆ | | 28 |
| 9. | ಕೈ ತುತ್ತು ತಿನಿಸಿದ್ದೆ | ಜನಪದ | 30 |
| 10. | ಏಕತೆಯಲ್ಲಿ ವಿವಿಧತೆ | ವಿ. ಮುನಿವೆಂಕಟಪ್ಪ | 33 |
| 11. | ಹಸಿರು ಹೊನ್ನು | ಎಂಡಿ. ಗೋಗೇರಿ | 35 |
| 12. | ಸರ್ವಜ್ಞನ ವಚನಗಳು | ಸರ್ವಜ್ಞ | 37 |
| 13. | ಪರಿಸರ ರಕ್ಷಿಸು | ಅರುಣಕುಮಾರ ರಾಜಮಾನೆ | 39 |
| 14. | ಇಂದು ಬಾಲರು ಮುಂದೆ ಯೋಧರು | ರಂಗನಾಥ ಅಕ್ಕಲಕೋಟ | 42 |
| 15. | ನಮ್ಮ ಹೊಲ | ಎ.ಕೆ. ರಾಮೇಶ್ವರ | 44 |


Get More Learning Materials Here : CLICK HERE www.studentbro.in

# 1. ಚನ್ನಮಣೆ

ಮಕ್ಕಳಿಗೆ ಬಹುಪ್ರಿಯವಾದ ವಿಷಯವೆಂದರೆ ಆಟ. ಸಮ ವಯಸ್ಸಿನ ಮಕ್ಕಳೆಲ್ಲಾ ಒಂದು ಕಡೆ ಸೇರಿದಾಗ ಅವರ ಗಮನ ಮೊದಲು ಹರಿಯುವುದು ಆಟದ ಕಡೆಗೆ. ಸಾಮೂಹಿಕವಾಗಿ ಭಾಗವಹಿಸಿ ಆಡುವ ಆಟಗಳು ಮಕ್ಕಳಿಗೆ ಹೆಚ್ಚು ಸಂತೋಷ ಕೊಡುತ್ತವೆ. ದಿನನಿತ್ಯ ತಮ್ಮ ಹಿರಿಯರು ಮಾಡುವ ಅನೇಕ ಕೆಲಸ ಕಾರ್ಯಗಳನ್ನು, ಆಚಾರ ವಿಚಾರಗಳನ್ನು ಅವರು ಅನುಕರಿಸಿ ಆಡುವುದುಂಟು. ಋತುಮಾನಕ್ಕೆ ತಕ್ಕಂತೆ ಅವರ ಆಟಗಳಲ್ಲಿ ವೈವಿಧ್ಯವಿರುತ್ತದೆ. ಈ ಆಟಗಳು ಇಂದು ನಿನ್ನೆ ಹುಟ್ಟಿದವುಗಳಲ್ಲ; ಆದಿಮಾನವನ ಜೊತೆ ಜೊತೆಯಲ್ಲಿಯೇ ಬೆಳೆದು ಬಂದವು. ಮೊದಮೊದಲು ಕೇವಲ ಮನೋರಂಜನೆಯ ಸಾಧನವಾಗಿದ್ದವುಗಳು ಕ್ರಮೇಣ ದೈಹಿಕ, ಬೌದ್ಧಿಕ, ಮಾನಸಿಕ ವಿಕಾಸದ ಕಡೆಗೂ ಸಾಗಿರುವುದು ಕಂಡುಬರುತ್ತದೆ.

ಬದುಕನ್ನು ಹಸನುಗೊಳಿಸಲು ಆಟಗಳು ಬೇಕು; ಅಲ್ಲದೆ ಅವು ಇಂದಿನ ಮಕ್ಕಳು ಮುಂದಿನ ಸತ್ಪ್ರಜೆಯಾಗಿ ಬಾಳಲು ಸಹಾಯಕವಾಗುವಂತೆ ಕಲಿಸುವ ಪಾಠಗಳಾಗಿರಬೇಕು. ಈ ದೃಷ್ಟಿಯಿಂದ ಜೀವನದಲ್ಲಿ ಆಟಗಳಿಗೆ ಮಹತ್ವದ ಸ್ಥಾನವನ್ನು ನೀಡಬಹುದಾಗಿದೆ. ದೈನಂದಿನ ಆಟಗಳಲ್ಲಿ ಉಂಟಾಗುವ ಸೋಲುಗೆಲುವುಗಳು ಮಕ್ಕಳಿಗೆ ನಾಳಿನ ಜೀವನದಲ್ಲಿ ಬರುವ ಸೋಲು- ಗೆಲುವುಗಳನ್ನು ಸಹಜವಾಗಿ ಸ್ವೀಕರಿಸುವ ಸಮತಾ ಪ್ರಜ್ಞೆಯನ್ನು ಕಲಿಸಿಕೊಡುತ್ತವೆ. ಭಿನ್ನ ಸ್ವಭಾವದ ಮಕ್ಕಳೊಡನೆ ಬೆರೆತು ಆಡುವಾಗ ಪರಸ್ಪರರ ಗುಣ ಸ್ವಭಾವಗಳನ್ನು ಅರಿತು ಕೂಡಿಬಾಳುವ ಗುಣವನ್ನು ಬೆಳೆಸಿಕೊಡುತ್ತವೆ; ಧೈರ್ಯ, ಶಕ್ತಿ ಯುಕ್ತಿ ಚಾತುರ್ಯಗಳನ್ನು ಒದಗಿಸಿಕೊಡುತ್ತವೆ.

ಮಕ್ಕಳ ಚುರುಕುತನ ಹಾಗೂ ಕುತೂಹಲ ದೃಷ್ಟಿಯ ಕಾರಣವಾಗಿ ವಿವಿಧ ಬಗೆಯ ಆಟಗಳು ಬಳಕೆಗೆ ಬಂದಿರುವುದು ಕಂಡುಬರುತ್ತದೆ. ವಯೋಗುಣಕ್ಕನುಗುಣವಾಗಿ, ಪ್ರದೇಶಕ್ಕನುಗುಣವಾಗಿ, ಸಂದರ್ಭಕ್ಕನುಗುಣವಾಗಿ ಆಟಗಳಲ್ಲಿ ವ್ಯತ್ಯಾಸಗಳನ್ನು ಕಾಣಬಹುದು. ಮಕ್ಕಳು ಆಟಕ್ಕಾಗಿ ಬಳಸುವ ಸಾಧನಗಳು ಅಥವಾ ಸಲಕರಣೆಗಳು ತುಂಬಾ ಸರಳ ಹಾಗೂ ಸುಲಭವಾಗಿ ದೊರಕುವಂಥವಾಗಿರುತ್ತವೆ. ಕಲ್ಲು, ಹುಣಸೇ ಬೀಜ, ಗೋಲಿ, ಗಜುಗ, ಬುಗುರಿ, ಬಳೆಚೂರು, ಮರದ ಸಣ್ಣ ತುಂಡುಗಳು, ಬಟ್ಟೆ ಚೂರು, ಇತ್ಯಾದಿಗಳೇ ಅವರ ಸಾಧನಗಳಾಗಿರುತ್ತವೆ. ಕೆಲವು ಆಟಗಳಿಗೆ ಆಡುವವರ ಕೈಗಳೇ ಸಾಕು. ಈ ಎಲ್ಲ ಸಾಧನಗಳನ್ನು ಬಳಸಿಕೊಂಡು ಆಡುವ ಆಟಗಳನ್ನು ಈಗ ಪರಿಚಯ ಮಾಡಿಕೊಳ್ಳಬಹುದು. ವಿಷಯ ಸ್ಪಷ್ಟತೆಗಾಗಿ ಆಟಗಳಲ್ಲಿ ಎರಡು ವಿಭಾಗ ಮಾಡಿಕೊಳ್ಳಬಹುದು: 1) ಒಳಾಂಗಣ ಆಟಗಳು, 2) ಹೊರಾಂಗಣ ಆಟಗಳು.

## ಚನ್ನಮಣೆ

ಇದು ಒಳಾಂಗಣ ಆಟದಲ್ಲಿ ಹೆಚ್ಚು ಖುಷಿ ಕೊಡುವಂಥದ್ದು. ಹೆಚ್ಚಾಗಿ ಹೆಣ್ಣು ಮಕ್ಕಳು ಕೂಡಿ ಆಡುತ್ತಾರೆ. ಇದಕ್ಕೆ ಹರಳುಗುಳಿ ಮಣೆ, ಪತ್ತಾಮಣೆ ಎಂದೂ ಕರೆಯುತ್ತಾರೆ. ಈ ಮಣೆ ಮರದಿಂದ ಮಾಡಿದ್ದು. ಒಂದೊಂದು ಸಾಲಿನಲ್ಲಿ ಏಳು ಏಳು ಗುಳಿಗಳನ್ನು ಮಾಡಿರುತ್ತಾರೆ. ಅದರ ಎರಡು ತುದಿಗಳಿಗೂ ಗೆದ್ದ ಕಾಳುಗಳನ್ನು ತುಂಬಲು ಎರಡು ಕೊಳಗಳನ್ನು ಮಾಡಿರುತ್ತಾರೆ. ಒಂದೊಂದು ಗುಳಿಗೂ ಏಳು ಹುಣಿಸೆಬೀಜ ಅಥವಾ ಹರಳುಗಳನ್ನು ಹಾಕಿಕೊಂಡು ಆಡುತ್ತಾರೆ. ಇದರಲ್ಲಿ ಹಸುವಿನ ಆಟ, ಅರಸನ ಆಟ, ಕಾಶಿ ಆಟ, ಮೂಲೆಕಟ್ಟು ಆಟ ಎಂಬ ಬಗೆಗಳಿವೆ, ಹಸುವಿನ ಆಟದಲ್ಲಿ, ಆಟ ಪ್ರಾರಂಭಿಸುವವರು ತಮ್ಮ ಕಡೆಯ ಸಾಲಿನ ಯಾವುದಾದರೂ ಒಂದು ಮನೆಯ (ಗುಳಿಯ) ಕಾಳುಗಳನ್ನು ತೆಗೆದುಕೊಂಡು ಮುಂದಿನ ಮನೆಗಳಿಗೆ ಹಾಕುತ್ತಾ ಹೋಗುತ್ತಾರೆ. ಕಾಳು ಮುಗಿದಾಗ ಆದರ ಮುಂದಿನ ಮನೆಯ ಕಾಳುಗಳನ್ನು ಎತ್ತಿಕೊಂಡು ಮತ್ತೆ ಅದರ ಮುಂದಿನ ಮನೆಗಳಿಗೆ ಹಾಕುತ್ತಾ ಹೋಗುತ್ತಾರೆ. ನಡುವೆ ಎಲ್ಲೋ ಖಾಲಿ ಮನೆ ಸಿಗುತ್ತದೆ. ಆಗ ಆ ಮನೆಯನ್ನು ಬಿಟ್ಟು ಅದರ ಮುಂದಿನ ಮನೆಯ ಕಾಳುಗಳನ್ನು ಮತ್ತು ಅದರ ಎದುರಿನ ಸಾಲಿನ ಮನೆಯ ಕಾಳುಗಳನ್ನು ತಮ್ಮ ಪಾಲಿನವುಗಳೆಂದು ತೆಗೆದುಕೊಳ್ಳುತ್ತಾರೆ. ಹೀಗೆ ಆಡುವಾಗ ಮಧ್ಯೆ ಮಧ್ಯೆ ಖಾಲಿ ಮನೆಗಳಿಗೆ ಕಾಳುಬಿದ್ದು, ನಾಲ್ಕು ಕಾಳು ಒಟ್ಟುಗೂಡಿದರೆ ಅವನ್ನು 'ಕರು ಕಟ್ಟಿದೆ' ಎಂದು ತೆಗೆದು ಕೊಳ್ಳುತ್ತಾರೆ. ಹೀಗೆ ಆಡುವಾಗ ಮುಂದೆ ಎರಡು ಮನೆ ಖಾಲಿ ಬಿದ್ದು ಕಾಳೂ ಅಲ್ಲಿಗೇ



Get More Learning Materials Here : CLICK HERE www.studentbro.in



ಮುಕ್ತಾಯವಾದರೆ ಅವರು ಆಟವನ್ನು ಬಿಟ್ಟು ಕೊಡಬೇಕು. ಹೀಗೆ ಯಾರಾದರೊಬ್ಬರು ಹೆಚ್ಚು ಕಾಳುಗಳನ್ನು ಗೆಲ್ಲುವವರೆಗೂ ಆಟವನ್ನು ಮುಂದುವರಿಸುತ್ತಾರೆ. ಹೀಗೆ ಕೊನೆಯವರೆಗೂ ಆಡಿ ಒಂದು ಮನೆಯನ್ನು ತುಂಬಿಸ ಲಾರದಷ್ಟು ಕಾಳುಗಳನ್ನು ಉಳಿಸಿಕೊಳ್ಳದೆ ಕಳೆದುಕೊಂಡಾಗ ಅಂದರೆ ಐದು ಕಾಳುಗಳಗೂ ಕಡಿಮೆ ಇದ್ದಾಗ 'ಬಿತ್ತರಳು' ಎಂದು ಒಂದೊಂದು ಮನೆಗೂ ಒಂದೊಂದು ಕಾಳುಹಾಕಿ ಆಡುವುದುಂಟು. ಸೋತವರೆಂದರೆ ಎಲ್ಲಾ ಕಾಳುಗಳನ್ನೂ ಕಳೆದುಕೊಂಡವರು.

ಅರಸನ ಆಟದಲ್ಲಿ ಮಣೆಯ ಎರಡು ತುದಿಯ ನಾಲ್ಕು ನಾಲ್ಕು ಮನೆಗಳನ್ನು ಸೇನಾಪತಿಗಳು ಹಂಚಿಕೊಂಡು ಮಧ್ಯದ ಆರು ಮನೆಗಳನ್ನು ರಾಜನಿಗೆ ವಹಿಸಿಕೊಟ್ಟು ಆಟ ಆಡುವುದು. ಆಟದ ಕೊನೆಯಲ್ಲಿ ರಾಜನಿಗೆ ಒಂದೊಂದು ಕಾಳನ್ನು ಈರ್ವರೂ 'ಕಪ್ಪ' ಎಂದು ಕೊಡುತ್ತಾರೆ. ನಾಲ್ಕು ಮಂದಿ ಆಡುವಾಗ ಇಬ್ಬರು ಮೂರು ಮನೆಗಳನ್ನು ಇಬ್ಬರು ನಾಲ್ಕು ಮನೆಗಳನ್ನು ಹಂಚಿಕೊಂಡು ಆಡುತ್ತಾರೆ. ಮೂಲೆ ಕಟ್ಟುವ ಆಟ. ಕಾಶಿಯ ಆಟಗಳೂ ಕೂಡ ಒಂದು ನಿಯಮಕ್ಕೆ ಒಳಪಟ್ಟು ಆಡುವಂಥವು.

### ಕಟ್ಟೆಮಣೆ ಆಟ ಅಥವಾ ಚೌಕಾಭಾರ ಆಟ

ಇದನ್ನು ನೆಲದ ಮೇಲೆ ಎರಡು ರೀತಿಯಾಗಿ ಬರೆದುಕೊಂಡು ಆಡುತ್ತಾರೆ. ಐದು ಚದರ ಮನೆಗಳನ್ನು ಬರೆದಾಗ ನಾಲ್ಕು ಕಾಳುಗಳನ್ನು ಇಟ್ಟುಕೊಂಡು ನಾಲ್ಕು ಕವಡೆಗಳನ್ನು ಬಿಟ್ಟುಕೊಂಡು ಆಡುತ್ತಾರೆ. ಏಳು ಚದರ ಮನೆಗಳನ್ನು ಬರೆದಾಗ ಆರು ಕಾಯಿಗಳನ್ನು ಇಟ್ಟುಕೊಂಡು ಆಡುತ್ತಾರೆ.



Get More Learning Materials Here : CLICK HERE www.studentbro.in

**ಶಬ್ದಗಳ ಅರ್ಥ:**

ಭಾಗವಹಿಸು – ಪಾಲ್ಗೊಳ್ಳು; ಹಸನು – ಮನೋಹರತೆ, ಜಳಜಳವಾಗುವಿಕೆ

## ಅಭ್ಯಾಸ

**ಕೃತಿ 1) ಕೆಳಗಿನ ವಿಧಾನಗಳನ್ನು ಸರಿ ತಪ್ಪು ಎಂಬುದನ್ನು ಹೇಳು. ತಪ್ಪಿದ್ದರೆ ಸರಿಪಡಿಸಿ ಬರೆಯಿರಿ.**

1) ಸಾಮೂಹಿಕವಾಗಿ ಭಾಗವಹಿಸಿ ಆಡುವ ಆಟಗಳು ಮಕ್ಕಳಿಗೆ ಹೆಚ್ಚು ಸಂತೋಷ ಕೊಡುತ್ತವೆ.

ಉತ್ತರ: ........................................................................................................

2) ಆಟಗಳಿಂದ ಕೇವಲ ಆಟಗಾರರ ಮನೋರಂಜನೆಯಾಗುತ್ತದೆ.

ಉತ್ತರ: ........................................................................................................

3) ಆಟಗಳು ಧೈರ್ಯ, ಶಕ್ತಿ ಯುಕ್ತಿ ಚಾತುರ್ಯಗಳನ್ನು ಒದಗಿಸಿಕೊಡಲಾರವು.

ಉತ್ತರ: ........................................................................................................

4) ಪ್ರತಿಯೊಂದು ಆಟಕ್ಕೆ ಸಲಕರಣೆಗಳು ಅವಶ್ಯಕ ಸಲಕರಣೆಯಿಲ್ಲದೆ ಆಟವಾಡಲು ಬರುವುದಿಲ್ಲ.


ಉತ್ತರ: ........................................................................................................

5) ಆಟಗಳು ಮಕ್ಕಳಿಗೆ ನಾಳಿನ ಜೀವನದಲ್ಲಿ ಬರುವ ಸೋಲು-ಗೆಲುವುಗಳನ್ನು ಸಹಜವಾಗಿ ಸ್ವೀಕರಿಸುವ ಸಮತಾ ಪ್ರಜ್ಞೆಯನ್ನು ಕಲಿಸಿಕೊಡುತ್ತವೆ.


ಉತ್ತರ: ________________________________________

**ಕೃತಿ 2) ಕೆಳಗಿನ ಜಾಲಾಕೃತಿಗಳನ್ನು ಪೂರ್ಣಗೊಳಿಸಿರಿ.**

1)





2)






Get More Learning Materials Here : CLICK HERE www.studentbro.in

3)




**ಕೃತಿ 3) ಕೆಳಗಿನ ಪ್ರಕಟನೆಯನ್ನು ಓದು. ಅದರಲ್ಲಿಯಲ್ಲಿಯ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿರಿ.**

**ಶಿವಬಸವ ಕ್ರೀಡಾಕೇಂದ್ರ ವಿರಾಟನಗರ ಆಯೋಜಿತ**

**ಹುಡುಗಿಯರ ಕಬಡ್ಡಿ ಸ್ಪರ್ಧೆ**

ವಯೋಗುಂಪು :- 14 ವರ್ಷ ಒಳಗಿನ ಹುಡುಗಿಯರು

ದಿನಾಂಕ :- 13 ಅಗಸ್ಟ 2018

ವಾರ :- ಬುಧವಾರ

ವೇಳೆ :- ಮುಂಜಾನೆ 9.00 ಗಂಟೆ

ಸ್ಥಳ :- ಜಿ.ಪ. ಕನ್ನಡ ಶಾಲೆ ಮೈದಾನ, ವಿರಾಟನಗರ, ಮುಂಬಯಿ.

ಪ್ರವೇಶ ಪಡೆಯುವ ಕೊನೆಯ ದಿನಾಂಕ :- 10 ಅಗಸ್ಟ 2018.

1) ಮೇಲಿನ ಪ್ರಕಟನೆಯಲ್ಲಿ ಯಾವ ಕ್ರೀಡಾ ಸ್ಪರ್ಧೆ ಆಯೋಜಿಸಲಾಗಿದೆ ?

ಉತ್ತರ: ..............................................................................................

..............................................................................................

2) ಕ್ರೀಡಾ ಸ್ಪರ್ಧೆಯ ಆಯೋಜನೆ ಯಾರು ಮಾಡಿದ್ದಾರೆ ?

ಉತ್ತರ: ..............................................................................................

..............................................................................................

3) 13 ವರ್ಷ ವಯಸ್ಸಿನ ಕಿಶೋರನು ಸ್ಪರ್ಧೆಯಲ್ಲಿ ಭಾಗವಹಿಸಬಹುದೇ ?

ಉತ್ತರ: ..............................................................................................

..............................................................................................



Get More Learning Materials Here : CLICK HERE www.studentbro.in

4) 16 ವರ್ಷ ವಯಸ್ಸಿನ ವಿಜಯನಿಗೆ ಕಬಡ್ಡಿಯಲ್ಲಿ ಬಹಳ ಆಸಕ್ತಿ ಇದೆ. ಆದರೆ ಅವನಿಗೆ ಈ ಸ್ಪರ್ಧೆಯಲ್ಲಿ ಭಾಗವಹಿಸಲು ಬರುವುದಿಲ್ಲ. ಏನು ಕಾರಣ ಇರಬಹುದು?

ಉತ್ತರ: ..........................................................................................................

..........................................................................................................

5) ಸ್ಪರ್ಧೆಯಲ್ಲಿ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಯಾವುದು?

ಉತ್ತರ: ..........................................................................................................

..........................................................................................................

**ಕೃತಿ 4) ಕೆಳಗಿನ ಅಂಶಗಳನ್ನು ಬಳಸಿ ಆಟದ ಮಹತ್ವವನ್ನು ನಿನ್ನ ಮಾತುಗಳಲ್ಲಿ ಬರೆಯಿರಿ.**

ಮಕ್ಕಳು, ಸತ್ಪ್ರಜೆ, ಸೋಲು- ಗೆಲುವು, ನೇತೃತ್ವ ಗುಣ

ಉತ್ತರ: ..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

**ಉಪಕ್ರಮ :** ವಿವಿಧ ಆಟಗಳ ನಿಯಮಗಳನ್ನು ತಿಳಿದುಕೊಂಡು ಉಳಿದ ಗೆಳೆಯ-ಗೆಳತಿಯರಿಗೆ ತಿಳಿಸಿ ಹೇಳಿರಿ.

IJPLR2



Get More Learning Materials Here : CLICK HERE www.studentbro.in

# 2. ನಮ್ಮೂರೇ ಚೆಂದ...



ಚೆಂದದ ಚಿನ್ನಾರಿ, ಒಂದಾನೊಂದು ಹಳ್ಳಿಯ ಅಂಚಿನಲ್ಲಿರುವ ಗದ್ದೆಯಲ್ಲಿ ಒಂದು ಇಲಿ ವಾಸವಾಗಿತ್ತು. ಗದ್ದೆಯಲ್ಲಿ ಬೆಳೆಯುವ ಅಕ್ಕಿ, ಗೋಧಿ, ಜೋಳ ಸಮೃದ್ಧವಾಗಿ ತಿನ್ನುತ್ತಾ ಇತ್ತು. ಅವುಗಳನ್ನು ತಿಂದು ಇಲಿ ತನ್ನ ಬಿಲದಲ್ಲಿ ಸುಖವಾಗಿತ್ತು.

ಹೀಗಿರುವಾಗ ಒಂದು ದಿನ ಅದೆಲ್ಲಿಂದಲೋ ಅಲ್ಲಿಗೆ ಒಂದ ಪಟ್ಟಣದ ಇಲಿ ಬಂತು. ತಿಂದು ಕೊಬ್ಬಿ ದಷ್ಟಪುಷ್ಟವಾಗಿತ್ತು. ಬರ್ತಾ ಇರೋ ಹಾಗೆ ಈ ನಮ್ಮ ಇಲಿರಾಯರ ಕಣ್ಣಿಗೆ ಬಿತ್ತು. ''ಅರೆರೇ, ಎಲ್ಲಿಂದ ಬರ್ತಾ ಇದಿಯಾ? ಯಾವೂರು ನಿಮ್ಮದು? ರಾತ್ರಿ ಉಳಿದುಕೊಳ್ಳೋಕೆ ಬೇಕಾದ್ರೆ ನನ್ನ ಮನೆಗೆ ಬರಬಹುದು'' ಎಂದಿತು. ''ನಾನು ಪಟ್ಟಣರಾಯ. ಇಲ್ಲಿಂದ ತುಂಬಾ ದೂರ ಇದೆ ನನ್ನೂರು. ಹೀಗೆ ಹಳ್ಳಿ ನೋಡಿಕೊಂಡು ಹೋಗೋಣ ಅಂತ ಹೊರಟೆ. ಬರೋ ಗಾಡಿ ಇತ್ತು ಬಂದೆ. ನನಗ್ಯಾರೂ ಗುರುತಿಲ್ಲ ಇಲ್ಲಿ'' ಅಂತು.

ನಮ್ಮ ಹಳ್ಳಿ ರಾಯರು ಬಲು ಸಂಭ್ರಮದಿಂದ ಹೊಸ ಅತಿಥಿಯನ್ನು ತನ್ನ ಮನೆಗೆ ಕರೆದುಕೊಂಡು ಬಂದರು. ರಾಗಿ, ಜೋಳ, ಗೋಧಿ, ತೆಂಗಿನಕಾಯಿ... ಹೀಗೆ ತರಹಾವರಿ ಊಟ ಬಡಿಸಿದರು. ತನ್ನ ಪರಿಚಯದವರ ಭೇಟಿ ಮಾಡಿಸಿದರು. ಹೊಲಗದ್ದೆ, ಕಡೆಗೆ ಊರ ಜಮೀನುದಾರನ ಮನೆಗೂ ಕರೆದುಕೊಂಡು ಹೋಗಿ ತೋರಿಸಿಕೊಂಡು ಬಂದರು. ಪಟ್ಟಣರಾಯರೂ ಖುಷಿಪಟ್ಟರು.

ಹಳ್ಳಿರಾಯರಿಗೆ ಪಟ್ಟಣವಾಸದ ಬಗ್ಗೆ ತುಂಬಾ ಕುತೂಹಲ ಇತ್ತು. ಅಷ್ಟೇ ಅಲ್ಲ, ಪಟ್ಟಣ ಅನ್ನುವ ಸ್ವರ್ಗಕ್ಕೆ ಸಾಧ್ಯವಾದರೆ ಇದರ ಜೊತೆಗೆ ಹೋಗಿಬಿಡಬೇಕು ಅಂತ ಮನಸ್ಸು ಇತ್ತು. ಪಟ್ಟಣರಾಯರಿಗೆ ಇದೆಲ್ಲ ಗೊತ್ತಿರಲಿಲ್ಲ ನೋಡು! ಅದು ತನ್ನೂರಿನ ಬಗ್ಗೆ ಹೇಳಿಕೊಳ್ಳೋಕೆ ಶುರುಮಾಡಿತು.

''ನಾನಿರೋದು ಭವ್ಯವಾದ ಒಂದು ಬಂಗಲೆಯಲ್ಲಿ. ಹೀಗೆ ಕೊಳಕು ಬಿಲ ಅನ್ನೋದು ಅಲ್ಲಿ ಇಲ್ಲವೇ ಇಲ್ಲ. ಮಲಗಲು ಮೃದುವಾದ ಸುಪ್ಪತ್ತಿಗೆ ಇದೆ ನನಗೆ. ಕತ್ತಲು ಅನ್ನುವುದೇ ಗೊತ್ತಿಲ್ಲ. ಸದಾ ಬೆಳಕೋ ಬೆಳಕು. ಇನ್ನು ಊಟಾನೋ, ಆಹಾ! ಎಂತೆಂಥ ತರಹಾವರಿ ಕಾಳುಗಳು, ಗಿಣ್ಣು, ಕೇಕು, ದೋಸೆ, ಇಡ್ಲಿ, ಇನ್ನೂ ಏನೇನೋ ಇರುತ್ತೆ. ಪ್ರತಿದಿನ ಬೇರೆ ಬೇರೆ ತಿಂಡಿ. ನೀವ್ಯಾರೂ ಕಂಡಿಲ್ಲದ, ಕೇಳಿಲ್ಲದಂಥವು. ಇವುಗಳನ್ನೆಲ್ಲಾ ವಿವರಿಸೋದಕ್ಕೆ ಸಾಧ್ಯವಿಲ್ಲ. ಅನುಭವಿಸಿಯೇ ತಿಳಿಯಬೇಕು. ನನ್ನಂಥ ಭಾಗ್ಯವಂತರಿಗೆ ಮಾತ್ರ ಲಭ್ಯ ಇದು. ನಿನ್ನ ಬಡತನ ಕಂಡು ನನಗೆ ದುಃಖವಾಗ್ತಾ ಇದೆ'' ಅಂತ ಸೇರಿಸಿತು.



Get More Learning Materials Here : CLICK HERE www.studentbro.in

ಹಳ್ಳಿರಾಯರಿಗೆ ಬಲು ದುಃಖವಾಯ್ತು. ''ಛೇ! ಹೇಗಾದ್ರೂ ಮಾಡಿ ಈ ದುರವಸ್ಥೆಯಿಂದ ಪಾರಾಗಲೇ ಬೇಕು. ಇವನೊಂದಿಗೆ ಶಹರಕ್ಕೆ ಹೋಗಲೇಬೇಕು'' ಅಂತ ಯೋಚಿಸಿತು. ''ಅಣ್ಣಾ, ನನ್ನನ್ನು ನಿನ್ನೊಂದಿಗೆ ಕರೆದುಕೊಂಡು ಹೋಗಿ ನಿನ್ನ ಸ್ವರ್ಗ ತೋರಿಸು'' ಅಂತ ಗೋಗರೆಯಿತು. ದೇವರು ಬುದ್ಧಿ ಕೊಟ್ಟಾಂತ ಕಾಣುತ್ತೆ ಪಟ್ಟಣರಾಯರು ಒಪ್ಪಿದರು.

ಒಂದು ದಿನ ಇಬ್ಬರೂ ಗಾಡಿ ಹತ್ತಿ ಶಹರಕ್ಕೆ ಬಂದರು. ಪಟ್ಟಣರಾಯ ಮಿತ್ರನನ್ನು ತನ್ನ ಮನೆಗೆ ಕರೆದುಕೊಂಡು ಬಂದ. ಮನೆಯ ಗಾತ್ರ, ವೈಭವ, ಅಲಂಕಾರ ಕಂಡ ಹಳ್ಳಿರಾಯ ಮೂಕನಾಗಿ ಹೋದ. ರಾತ್ರಿಯಾಯಿತು. ಊಟದ ಹೊತ್ತು ಅಂತ ಚುರುಗುಡುತ್ತಿದ್ದ ಹೊಟ್ಟೆ ನೆನಪು ಮಾಡಿತು. ಊಟದ ಮನೆಗೆ ಹೋದರು ಇಬ್ಬರು ಮಿತ್ರರು. ಬೋದಿಗೆಯ ಮೇಲೆ ನಾನಾ ರೂಪದ, ರುಚಿಯ ಆಹಾರ ಇತ್ತು. ಹಳ್ಳಿರಾಯ ಮನಸೋ ಇಚ್ಛೆ ತಿಂದ.

ತಿಂದ ಏನು, ತಿನ್ನುತ್ತಾ ಇದ್ದ. ಅಷ್ಟರಲ್ಲಿ ಝಗ್ಗಂತ ಬೆಳಕುಂಟಾಯಿತು. ಕೈಯಲ್ಲಿ ಪೊರಕೆ ಹಿಡಿದು ಕೆಲಸದವಳು ನಿಂತಿದ್ದಳು. ದೊಡ್ಡ ದೊಡ್ಡ ಕಣ್ಣುಗಳನ್ನು ಗರಗರಾಂತ ತಿರುಗಿಸುತ್ತಾ ಇವುಗಳನ್ನು ಹುಡುಕುತ್ತಾ ಇದ್ದಳು. ಪಟ್ಟಣರಾಯ, ''ತಲೆ ಕೆಳಗೆ ಹಾಕು. ಅವಳ ಕಣ್ಣಿಗೆ ಬಿದ್ದರೆ, ಸತ್ತೆವು ಅಂತಾನೇ ಲೆಕ್ಕ'' ಅಂದಿತು ಪಿಸುಧ್ವನಿಯಲ್ಲಿ.

ಕೆಲವು ನಿಮಿಷ ಅತ್ತಿತ್ತ ನೋಡಿ ಅವಳು ದೀಪ ಆರಿಸಿ ಹೊರಟುಹೋದಳು. ಮತ್ತು ಹೊರಗೆ ಬಂದು ತಿನ್ನೋಕೆ ಶುರುಮಾಡಿದವು. ಎರಡು ನಿಮಿಷ ಕಳೆದಿರಬಹುದು. ಯಾರೋ ಕಿರುಚಾಡುತ್ತಿರೋದು ಕೇಳಿಸಿತು. ಮತ್ತೆ ದೀಪ ಬಂತು. ಈಗ ಒಳಗೆ ಬಂದವ ಮನೆಯ ಯಜಮಾನ. ಮೇಜಿನ ಕೆಳಗಿದ್ದ ಇಲಿ ಬೋನಿಗೆ ದಪ್ಪದ ಇಲಿಯೊಂದರ ಕಾಲು ಸಿಕ್ಕಿಕೊಂಡಿತ್ತು. ನೋವು ತಾಳಲಾರದೆ ಅದು ನರಳಾಡುತ್ತಿತ್ತು. ಯಜಮಾನ ದಪ್ಪ ಕೋಲಿನಿಂದ ಅದರ ತಲೆಗೆ ಒಂದು ಏಟು ಹಾಕಿದ. ಅಲ್ಲಿಗೆ ಅದರ ಕಿರುಚಾಟ ತಣ್ಣಗಾಯಿತು. ಸತ್ತ ಇಲಿಯ ಬಾಲ ಹಿಡಿದು ಅವನದನ್ನು ಕಿಟಕಿ ಯಿಂದ ಹೊರಗೆಸೆದು, ಕೈತೊಳೆದುಕೊಂಡು ಹೊರಟು ಹೋದ. ದೀಪ ಆರಿತು.

ಹಳ್ಳಿರಾಯ ಬಾಯಲ್ಲಿ ಹಿಡಿದಿದ್ದ ಖರ್ಜೂರವನ್ನು ಉಗುಳಿ, ''ಅಣ್ಣಾ, ನಾವು ಬಡವರು, ಬರೀ ಕಾಳು ತಿಂದು, ಕತ್ತಲ ಬಿಲದಲ್ಲಿ ಬದುಕುವವರು ಸರಿಯೇ. ಆದರೆ ಜೀವಭಯದಿಂದ ಹೀಗೆ ಕ್ಷಣ ಕ್ಷಣ ಸಾಯುವವರಲ್ಲ, ಆದುದರಿಂದ ನನಗೆ ನನ್ನೂರೇ ಸರಿ. ಆದುದರಿಂದ ನಾನು ಹೊರಟೆ. ಭಯವಿಲ್ಲದ ಸ್ವತಂತ್ರ ಬದುಕು ಬೇಕು ಎಂದಾದರೆ ನೀನೂ ನನ್ನೊಂದಿಗೆ ಬಾ'' ಎಂದಿತು.

ಮಾರನೆಯ ದಿನ ಇಬ್ಬರೂ ಕೈ ಕೈ ಹಿಡಿದುಕೊಂಡು ಹಳ್ಳಿಗೆ ಹೋಗುವ ಗಾಡಿ ಹತ್ತಿದರು.

**ಶಬ್ದಗಳ ಅರ್ಥ:-**

ಸಮೃದ್ಧ - ಬಹಳಷ್ಟು, ವಿಪುಲ; ಕೊಬ್ಬು - ಸೊಕ್ಕು; ಕುತೂಹಲ - ಆತುರ; ಶುರು - ಪ್ರಾರಂಭ; ಗಾತ್ರ - ಆಕಾರ; ಬೋದಿಗೆ - ಕಂಬದ ಮೇಲೆ ತೊಲೆಯನ್ನು ಕೂರಿಸಲು ಮಾಡಿದ ಸಾಧನ; ಬೋನು - ಪಂಜರ,

## ಅಭ್ಯಾಸ

**ಕೃತಿ 1) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

1) ..................................................................................................................................

ಉತ್ತರ: ..........................................................................................................................

2) ..................................................................................................................................

ಉತ್ತರ: ..........................................................................................................................



Get More Learning Materials Here : CLICK HERE www.studentbro.in

**ಕೃತಿ 2) ಕೆಳಗಿನ ಕೋಷ್ಟಕ ವನ್ನು ಪೂರ್ಣಗೊಳಿಸಿರಿ.**

1) ಹಳ್ಳಿಯ ಇಲಿಯ ಆಹಾರಗಳು → ...............................................

2. ಪಟ್ಟಣದ ಇಲಿಯ ಆಹಾರಗಳು → ...............................................

**ಕೃತಿ 3) ಕೆಳಗಿನ ಮಾತುಗಳು ಯಾರು-ಯಾರಿಗೆ ಹೇಳಿದರು? ಬರೆಯಿರಿ.**

1) ''ಅರೆರೇ ಎಲ್ಲಿಂದ ಬರ್‍ತಾ ಇದೀಯ? ಯಾವೂರು ನಿಮ್ಮದು?

**ಉತ್ತರ:** .............................................................................................................

2) ''ಅಣ್ಣಾ, ನನ್ನನ್ನು ನಿನ್ನೊಂದಿಗೆ ಕರೆದುಕೊಂಡು ಹೋಗಿ ಒಂದು ನಿನ್ನ ಸ್ವರ್ಗ ತೋರಿಸು''

**ಉತ್ತರ:** .............................................................................................................

3) ''ತಲೆ ಕೆಳಗೆ ಹಾಕು, ಅವಳ ಕಣ್ಣಿಗೆ ಬಿದ್ದರೆ, ಸತ್ತೇವು ಅಂತಾನೇ ಲೆಕ್ಕ''

**ಉತ್ತರ:** .............................................................................................................

**ಕೃತಿ 4) ಕೆಳಗಿನ ಗಾದೆ ಮಾತುಗಳನ್ನು ಗೆಳೆಯರೊಂದಿಗೆ/ಗುರುಗಳೊಂದಿಗೆ ಚರ್ಚಿಸಿ ಪೂರ್ಣಗೊಳಿಸಿ ಬರೆಯಿರಿ.**

1) ದೂರದ ಬೆಟ್ಟ ......................................................................................

2) ಬೆಕ್ಕಿಗೆ ಆಟ ..........................................................................................

3) ಆತಿ ಆಶೆ ..............................................................................................

4) ನಾನೊಂದು ಬಗೆದರೆ ..............................................................................

**ಕೃತಿ 5) ಕೆಳಗಿನ ಅಂಶಗಳನ್ನು ಆಧರಿಸಿ ನಿನ್ನ ಮಾತುಗಳಲ್ಲಿ ಒಂದು ಸಂವಾದ ರಚಿಸು. ಆ ಸಂವಾದ ವರ್ಗದಲ್ಲಿ ಓದಿ ತೋರಿಸಿರಿ.**

ಎರಡು ಬೆಕ್ಕುಗಳು .................... ಮೊಸರಿನ ಮಡಿಕೆ .................... ಬೆಕ್ಕುಗಳಲ್ಲಿ ಜಗಳ .................... ಮಂಗ .................... ತಕ್ಕಡಿ .................... ಮಂಗ ಓಡಿ ಹೋಯಿತು.

**ಕೃತಿ 6) ಎರಡು ಬೆಕ್ಕುಗಳಲ್ಲಿ ಹಾಗೂ ಮಂಗ ಇವುಗಳಲ್ಲಿಯ ಸಂವಾದ.**

**ಬೆಕ್ಕು:** .............................................................................................................

.............................................................................................................

.............................................................................................................

.............................................................................................................

.............................................................................................................

.............................................................................................................

.............................................................................................................

.............................................................................................................

**ಉಪಕ್ರಮ :** ಬೆಕ್ಕೆ, ಬೆಕ್ಕೆ ಮುದ್ದಿನ ಸೊಕ್ಕೆ ಎಲ್ಲಿಗೆ ಹೋಗಿದ್ದೆ- ಈ ಕವಿತೆಯನ್ನು ಶಿಕ್ಷಕರು ಹಾಗೂ ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ. ..................................

IJYHSP



Get More Learning Materials Here : CLICK HERE www.studentbro.in

# 3. ಶ್ರೇಷ್ಠತೆಯ ಲಕ್ಷಣಗಳೆಂದರೆ...

ಒಮ್ಮೆ, ಅಕ್ಬರ್ ಬಾದಷಾನಿಗೆ ಒಬ್ಬ ವಿದೇಶಿ ವ್ಯಕ್ತಿ ಒಂದು ಸುಂದರವಾದ ಗುಲಾಬಿ ಹೂವನ್ನು ಗೌರವಪೂರ್ವಕವಾಗಿ ಅರ್ಪಿಸಿದ. ಆ ಹೂವನ್ನು ಬಾದಷಾ ತುಂಬ ಸಂತೋಷದಿಂದಲೇ ಸ್ವೀಕರಿಸಿದ. ಆ ಹೂವಿನ ಪರಿಮಳ ಗಮನಿಸುತ್ತ, ಅದರ ಪರಿಮಳವನ್ನು ಆಸ್ವಾದಿಸತೊಡಗಿದ.

ಹಾಗಿರಲು, ಅಕ್ಬರ್‌ನ ತಲೆಯೊಳಗೆ ಒಂದು ವಿಚಾರ ಕಾಣಿಸಿಕೊಂಡಿತು. ಹಾಗೆಯೇ ಕೆಲವೊಂದು ಪ್ರಶ್ನೆಗಳು ಸುಳಿದಾಡಿದವು. ಉತ್ತರ ಪಡೆಯ ಬೇಕೆಂದರೆ, ಬೀರಬಲ್ ಊರಲ್ಲಿರಲಿಲ್ಲ. ಆತನೊಬ್ಬನೆ ಮಾತ್ರ ಇಂಥ ಪ್ರಶ್ನೆಗಳಿಗೆ ಉತ್ತರಿಸಬಲ್ಲ ಚತುರ ಅಂತೆನಿಸಿದರೂ.., ಬೇರೆ ಪಂಡಿತರನ್ನು ಕೇಳುವ ಆತುರ ಹುಟ್ಟಿತು.

ಅದೇ ದಿನ ದರ್ಬಾರ್‌ನಲ್ಲಿ ತನ್ನ ಪ್ರಶ್ನೆಗಳನ್ನು ಮುಂದಿಟ್ಟ. ''ಮಾನ್ಯ ಸಭಾಸದರೆ, ನಾನು ಕೆಲವು ಪ್ರಶ್ನೆಗಳನ್ನು ಕೇಳಬೇಕೆಂದಿದ್ದೇನೆ. ಅವುಗಳಿಗೆ ಯಾರು ಸಮಂಜಸವಾದ ಉತ್ತರಗಳನ್ನು ಕೊಡುತ್ತಾರೊ, ಅವರಿಗೆ ಎಂದಿನಂತೆ ಇನಾಮು ಕೊಟ್ಟು, ಗೌರವಿಸಲಾಗುವದು'' ಎಂದು ಬಾದಷಾ ಈ ಕೆಳಗಿನ ಐದು ಪ್ರಶ್ನೆಗಳನ್ನು ಕೇಳಿದನು.

1. ಹೂವುಗಳಲ್ಲಿ ಯಾವ ಹೂವು ಶ್ರೇಷ್ಠವಾದುದು?
2. ಯಾವ ಹಾಲು ನಮಗೆ ಅತ್ಯುತ್ತಮವಾದುದು?
3. ಈ ಜಗತ್ತಿನಲ್ಲಿ ತುಂಬ ರುಚಿಯಾದ ವಸ್ತು ಯಾವುದು?
4. ಯಾವ ಗಿಡದ ಎಲೆಗಳು ಶ್ರೇಷ್ಠವಾಗಿರುತ್ತವೆ?
5. ರಾಜರುಗಳಲ್ಲಿ ಶ್ರೇಷ್ಠನಾದ ರಾಜನು ಯಾರು?

ಅಕ್ಬರ್‌ನು ಕೇಳಿದ ಈ ಪ್ರಶ್ನೆಗಳು ಯಾರಿಗೂ ಜಟಿಲವೆನಿಸಲಿಲ್ಲ. ಒಬ್ಬೊಬ್ಬರಾಗಿ ಪಂಡಿತರು ಎದ್ದು ನಿಂತು, ತಮಗೆ ತೋಚಿದಂತೆ ಉತ್ತರಿಸ ತೊಡಗಿದರು.

''ಸಾಮ್ರಾಟರೆ, ಹೂಗಳಲ್ಲಿ ಕಮಲದ ಹೂವು ಬಹಳ ಸುಂದರವಾಗಿರುವುದರಿಂದ ಅದುವೇ ಶ್ರೇಷ್ಠವಾದ ಹೂವು'' ಎಂದು ಒಬ್ಬ ಹೇಳಿದರೆ,

''ಇಲ್ಲ ಜಹಾಂಪನಾ ಹೆಚ್ಚು ಪರಿಮಳ ಬೀರುವ ಮಲ್ಲಿಗೆ ಅತ್ಯಂತ ಶ್ರೇಷ್ಠವಾದುದು'' ಎಂದು ಇನ್ನೊಬ್ಬ ಉತ್ತರಿಸಿದ.

ಇನ್ನೊಬ್ಬ ಗುಲಾಬಿ ಹೂವು ಶ್ರೇಷ್ಠವೆಂದು ವಾದಿಸಿದರೆ, ಮಗದೊಬ್ಬಗೆ ಸಂಪಿಗೆ ಹೂವು ಅತ್ಯುತ್ತಮವೆನಿಸಿತು.

ಹಾಲಿನ ಬಗೆಗೂ ತರತರದ ಉತ್ತರಗಳು ಬಂದವು. ಹಸುವಿನ ಹಾಲು ಉತ್ತಮ ಎಂಬುದು ಒಬ್ಬ ಪಂಡಿತನ ಅಭಿಪ್ರಾಯವಾಗಿದ್ದರೆ, ಇನ್ನು ಕೆಲವರದು ಎಮ್ಮೆಯ ಹಾಲು, ಮೇಕೆಯ ಹಾಲು, ಹುಲಿಯ ಹಾಲುಗಳ ಪರವಾದ ವಾದವಾಗಿತ್ತು.

ಹೀಗೆಯೆ, ರುಚಿಯಾದ ವಸ್ತುವಿನ ಬಗ್ಗೆ ಅವರವರು ಭಿನ್ನ ರುಚಿಯ ಅಭಿಪ್ರಾಯ ಮಂಡಿಸಿದ್ದರು. ನೂರಾರು ಬಗೆಯ ಸಿಹಿ ತಿಂಡಿಗಳ ಹೆಸರು ಪ್ರಸ್ತಾಪವಾಗಿ ಅವರ ಬಾಯಲ್ಲಿ ನೀರೂರಿಸುವಂತಿದ್ದವು. ಎಲೆಗಳ ವಿಷಯ ಚರ್ಚೆಗೆ ಬಂದಾಗ ಹಲವರು ಊಟಕ್ಕೆ ಬರುವ ಬಾಳೆ ಎಲೆ, ಕೆಲವರು ಹಬ್ಬಕ್ಕೆ ಸಿಂಗರಿಸುವ ತೋರಣದ ಮಾವಿನ ಎಲೆ, ಇನ್ನೊಂದಿಷ್ಟು ಜನ ಔಷಧಿಗೆ ಉಪಯೋಗಿಸುವ ಬೇವಿನ ಎಲೆ ಶ್ರೇಷ್ಠವೆಂದು ವಾದ ಮಾಡಿದ್ದರು.



Get More Learning Materials Here : CLICK HERE www.studentbro.in

ಆದರೆ, ಕೊನೆಯ ಪ್ರಶ್ನೆ, 'ರಾಜರಲ್ಲಿ ಶ್ರೇಷ್ಠ ರಾಜನಾರು?' ಎಂಬ ಪ್ರಶ್ನೆಗೆ ಅವರೆಲ್ಲರದು ಒಂದೇ ಉತ್ತರವಾಗಿತ್ತು.

''ಸಾಮ್ರಾಟ ಅಕ್ಬರರೆ, ಅತ್ಯಂತ ಶ್ರೇಷ್ಠ ರಾಜರು'' ಎಂದು ಅವರೆಲ್ಲ ಹೇಳಿದ್ದನ್ನು ಕೇಳಿ ಬಾದಶಹಗೆ ಸಂತೋಷವೇನೊ ಆಯಿತು. ಪರಂತೂ, ಅದು ಸಮಂಜಸ ಉತ್ತರವೆನಿಸಲಿಲ್ಲ.

ನಾಳೆಯ ದಿನ ಬೀರಬಲ್‌ನ ಉತ್ತರಗಳನ್ನು ಕೇಳಿದ ಮೇಲೆ ತಮ್ಮ ನಿರ್ಣಯ ಪ್ರಕಟಿಸುವುದಾಗಿ ಬಾದಷ ಹೇಳಿದ.

ಮರುದಿನ ಬೀರಬಲ್ ದರ್ಬಾರಕ್ಕೆ ಬಂದಾಗ, ಅವೇ 5 ಪ್ರಶ್ನೆಗಳನ್ನು ಬಾದಷ ಕೇಳಿದ. ಒಂದಿನಿತು ತಡವರಿಸದೆ ಬೀರಬಲ್ ಪಟಪಟನೆ ಉತ್ತರಿಸ ತೊಡಗಿದ.

''ಹೂವುಗಳಲ್ಲಿ ಹತ್ತಿಯ ಹೂವು ಶ್ರೇಷ್ಠವಾದುದು. ಯಾಕೆಂದರೆ ನಮ್ಮ ಮರ್ಯಾದೆ ಕಾಪಾಡುವ ಬಟ್ಟೆಗಳು ಹತ್ತಿಯ ಹೂವಿನಿಂದಲೇ ಸಿದ್ಧಗೊಂಡಿರುತ್ತವೆ.''

''ನಾವೆಲ್ಲರೂ ಬೆಳೆದು ದೊಡ್ಡವರಾಗುವುದು ತಾಯಿಯ ಹಾಲಿನಿಂದಲೆ. ಆದುದರಿಂದ ತಾಯಿಯ ಹಾಲು ಅತ್ಯುತ್ತಮ.''

''ಮಾತಿನಿಂದಲೆ ನಾವು ಸ್ನೇಹವನ್ನು ಸಂಪಾದಿಸುತ್ತೇವೆ. ಎಂತಹ ವೈರಿಗಳು ಕೂಡ ಸವಿಮಾತಿಗೆ ಕರಗಿಹೋಗುತ್ತಾರೆ. ಆದುದರಿಂದ ಎಲ್ಲ ವಸ್ತುಗಳಲ್ಲಿ ರುಚಿಕಟ್ಟಾದುದು ಸವಿಮಾತಿನ ರುಚಿ.''

''ಎಲೆಗಳಲ್ಲಿ ವೀಳ್ಯದ ಎಲೆ ಉತ್ತಮವಾದುದು. ವೀಳ್ಯದೆಲೆ ವಿನಿಮಯ ಮಾಡಿಕೊಂಡು ನಾವು ಸಂಬಂಧಗಳನ್ನು ಸ್ನೇಹವನ್ನು ಕುದುರಿಸಿಕೊಳ್ಳುವದಿಲ್ಲವೆ.''

''ಇನ್ನೂ ಕೊನೆಯದಾಗಿ ರಾಜರುಗಳಲ್ಲಿ ಇಂದ್ರದೇವ ಶ್ರೇಷ್ಠನಾದ ರಾಜ. ಅವನಿಂದಲೆ ಮಳೆಯಾಗುತ್ತದೆ. ಮಳೆಯಿಂದ ನಾವು ಅನ್ನ ಬಟ್ಟೆ ಪಡೆಯುತ್ತೇವೆ. ಕುಡಿಯಲು ನೀರು ಸಿಗುತ್ತದೆ. ಪರಿಸರ ಶುದ್ಧವಾಗುತ್ತದೆ. ಪ್ರತಿ ಜೀವಿಯೂ ಬದುಕುತ್ತಿರುವುದು ಇಂದ್ರದೇವನ ಕೃಪೆಯಿಂದಲ್ಲವೆ?''

ಬೀರಬಲ್‌ನ ಉತ್ತರಗಳನ್ನು ಕೇಳಿದ ಅಕ್ಬರ ಹಾಗೂ ಇತರ ಕೆಲ ಗುಣಗ್ರಾಹಿ ಪಂಡಿತರು ಸಂತುಷ್ಟರಾದರು.

ಬಹುದೊಡ್ಡ ಇನಾಮು ಪಡೆದು ಬೀರಬಲ್ ವಿಜಯದ ನಗೆಯೊಂದಿಗೆ ಮನೆಗೆ ನಡೆದ.






Get More Learning Materials Here : CLICK HERE www.studentbro.in


**ಶಬ್ದಗಳ ಅರ್ಥ :**

ಬಾದಷಾ - ರಾಜ, ಅರಸ; ದರ್ಬಾರ - ಸಭಾ ಸ್ಥಾನ; ಪರಿಮಳ - ಸುಗಂಧ; ಹಸು - ಆಕಳು; ಸಿಂಗರಿಸು - ಅಲಂಕರಿಸು; ಸಮಂಜಸ - ಯೋಗ್ಯವಾದ, ಸರಿಯಾದ; ವಿನಿಮಯ - ಕೊಡುಕೊಳ್ಳುವಿಕೆ.

## ಅಭ್ಯಾಸ

**ಕೃತಿ 1) ಕೆಳಗಿನ ಜಾಲಾಕೃತಿ ಪೂರ್ಣಗೊಳಿಸಿರಿ.**





**ಕೃತಿ 2) ಸರಿಯಾಗಿ ಹೊಂದಿಸಿ ಬರೆಯಿರಿ.**

| 'ಅ' ಭಾಗ | 'ಬ' ಭಾಗ |
|---|---|
| 1) ಊಟಕ್ಕೆ ಬರುವ ಎಲೆ | (ಅ) ಬೇವಿನ ಎಲೆ |
| 2) ಹಬ್ಬಕ್ಕೆ ಸಿಂಗರಿಸುವ ತೋರಣದ ಎಲೆ | (ಬ) ಬಾಳೆಯ ಎಲೆ |
| 3) ಔಷಧಿಗೆ ಉಪಯೋಗಿಸುವ ಎಲೆ | (ಕ) ವೀಳ್ಯದೆಲೆ |
| 4) ಸ್ನೇಹ ಸಂಬಂಧಗಳನ್ನು ಕುದುರಿಸಿಕೊಳ್ಳುವ ಎಲೆ | (ಡ) ಮಾವಿನ ಎಲೆ |



Get More Learning Materials Here : CLICK HERE www.studentbro.in

**ಕೃತಿ 3) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**




**ಕೃತಿ 4) ಸವಿಮಾತಿನ ಮಹತ್ವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಉತ್ತರ:** ..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

**ಕೃತಿ 5) ಕಂಸಿನಲ್ಲಿಯ ಯೋಗ್ಯ ಪದಗಳನ್ನು ಆರಿಸಿ ಕೆಳಗಿನ ವಿಧಾನಗಳನ್ನು ಪೂರ್ತಿಗೊಳಿಸಿರಿ.**

(ಹತ್ತಿಯ ಹೂವು; ತಾಯಿಯ ಹಾಲು; ಗುಲಾಬಿ ಹೂವು, ಹಸುವಿನ ಹಾಲು)

1) ...................................................... ಮಗುವಿಗೆ ಎಲ್ಲಕ್ಕೂ ಅತ್ಯುತ್ತಮವಾದುದು.

2) ಹೂವುಗಳಲ್ಲಿ ಎಲ್ಲಕ್ಕಿಂತಲೂ ಶ್ರೇಷ್ಠವಾದ ಹೂವು ...................................................... ಆಗಿದೆ.

3) ವಿದೇಶಿ ವ್ಯಕ್ತಿಯು ಅಕ್ಬರ್ ಬಾದಶಾನಿಗೆ ...................................................... ನ್ನು ಕೊಟ್ಟನು.

**ಉಪಕ್ರಮ :** ಶಾಲೆಯ ಗ್ರಂಥಾಲಯದಿಂದ 'ಸಾಮ್ರಾಟ ಅಶೋಕ'ನ ಪುಸ್ತಕವನ್ನು ಪಡೆದು ಓದಿರಿ. ಅವನು ಮಾಡಿದ ಸಮಾಜೋಪಯೋಗಿ ವಿವಿಧ ಕಾರ್ಯಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

IK8DUC



Get More Learning Materials Here : CLICK HERE www.studentbro.in

# 4. ಸಸ್ಯಗಳ ಸಂತಾನಪ್ರೇಮ

ಮಾನವರು-ಅದರಂತೆಯೇ ಇತರ ಪ್ರಾಣಿಗಳು-ತಮ್ಮ ಮಕ್ಕಳು-ಮರಿಗಳನ್ನು ಪ್ರೀತಿಸುವುದೂ ಅವು ಬೆಳೆದು ದೊಡ್ಡದಾಗುವಂತೆ ಎಚ್ಚರಿಕೆಯಿಂದ ಕಾಪಾಡುವುದೂ ನಿಸರ್ಗದ ನಿಯಮ. ಪ್ರಾಣಿಗಳಂತೆ ಸಸ್ಯಗಳೂ ಜೀವಿಗಳು. ಅವೂ ವಂಶಾಭಿವೃದ್ಧಿಯನ್ನು ಮಾಡುತ್ತವೆ. ಕೆಲವು ಬೀಜಗಳಿಂದಲೂ, ಇನ್ನು ಕೆಲವು ಕಾಂಡ-ಗಡ್ಡೆ-ಗೆಣಸುಗಳಿಂದಲೂ ಹೊಸ ಸಸ್ಯಗಳನ್ನು ಬೆಳೆಸಿ, ತಮ್ಮ ವಂಶವನ್ನು ಮುಂದುವರಿಸುತ್ತವೆ. ತಮ್ಮ ಸಂತತಿ ಎಳೆಯದಿರುವಾಗ, ತಾಯಿ-ಸಸ್ಯಗಳು ಅವುಗಳನ್ನು ಸಾಕಿ ಸಲಹುವುದು ನಮಗೆ ಗೋಚರವಾಗುವುದಿಲ್ಲ; ಆದರೆ ಸಸ್ಯಗಳ ಜೀವನವನ್ನು ಚೆನ್ನಾಗಿ ಪರಿಶೀಲಿಸಿದರೆ, ಅವೂ ತಮ್ಮ ಸಂತತಿಯ ವಿಷಯದಲ್ಲಿ ಆಸಕ್ತಿಯನ್ನು ತಳೆದಿರುವುದು ವ್ಯಕ್ತವಾಗುತ್ತದೆ.

ಅನೇಕ ಸಸ್ಯಗಳು ತಮ್ಮ ವಂಶವನ್ನು ಮುಂದುವರಿಸಲು ಬೀಜಗಳನ್ನು ಉತ್ಪತ್ತಿ ಮಾಡುತ್ತವೆ. ಬೀಜದೊಳಗೆ ಅವುಗಳ ಎಳೆಯ ಸಂತಾನವು ಅಡಗಿರುವುದು. ಕಡಲೆಯ ಕಾಯ ಬೀಜವನ್ನು ಸೀಳಿ ನೋಡಿದರೆ, ಎರಡು ಬೇಳೆಗಳ ನಡುವೆ ಚಿಕ್ಕ ಸಸಿಯಂತಹ ಭಾಗವೊಂದು ಕಾಣುವುದು. ಅದೇ ಅದರ ಸಂತತಿ. ಅದಕ್ಕೆ ಸ್ವತಂತ್ರವಾಗಿ ಆಹಾರವನ್ನು ದೊರಕಿಸಿಕೊಳ್ಳುವುದು ಸಾಧ್ಯವಿರುವುದಿಲ್ಲ. ವಾತಾವರಣದ ಎಡರುಗಳಿಂದಲೂ ಶತ್ರುಗಳಿಂದಲೂ ರಕ್ಷಣೆಯನ್ನು ಪಡೆದು ಬದುಕುಳಿದಿರುವ ಶಕ್ತಿಯೂ ಅದಕ್ಕಿರುವುದಿಲ್ಲ ತಾಯಿಸಸ್ಯ ಇದನ್ನೆಲ್ಲ ಮೊದಲೇ ಮನಗಡು ತನ್ನ ಸಂತತಿಯ ಲಾಲನೆ- ಪಾಲನೆಗೆ ಅಗತ್ಯವಾದ ಎಲ್ಲ ಎಚ್ಚರಿಕೆಗಳನ್ನೂ ತೆಗೆದುಕೊಳ್ಳುತ್ತದೆ. ಅದಕ್ಕೆ ಬೇಕಾಗುವ ಆಹಾರವನ್ನು, ಅದರ ಪಕ್ಕದಲ್ಲಿಯೆ ಇರುವ ಬೇಳೆಗಳಲ್ಲಿ ಸಂಗ್ರಹಿಸಿ ಇಟ್ಟಿರುತ್ತದೆ; ಹೊರಗಿನಿಂದ ಅಪಾಯವು ಸಂಭವಿಸದಂತೆ, ತನ್ನ ಸಂತತಿಯ ಸುತ್ತಲೂ ರಕ್ಷಣೆಯ ಕೋಟೆಯನ್ನಾಗಿ ಬೀಜದ ಸಿಪ್ಪೆಯನ್ನು ನಿರ್ಮಿಸಿರುತ್ತದೆ. ಹೊರಗಡೆ ಒರಟಾದ ಸಿಪ್ಪೆಯೂ ಇರುವುದು. ಇಷ್ಟೇ ಅಲ್ಲ, ಬೀಜಮೊಳೆಯಲು ಬೇಕಾಗುವ ನೀರು ಒಳಗೆ ಪ್ರವೇಶಿಸಲು ಅನುಕೂಲವಾಗುವಂತೆ, ಒಂದು ಸಣ್ಣ ಬೀಜರಂಧ್ರವನ್ನೂ ಏರ್ಪಡಿಸಿರುವುದು. ಇದೆಲ್ಲವೂ ತಾಯಿಸಸ್ಯದ ಸಂತಾನ ಪ್ರೇಮವನ್ನು ವ್ಯಕ್ತಪಡಿಸುತ್ತದೆ.

ಕೆಲವು ಸಸ್ಯಗಳು ತಮ್ಮ ದೇಹದ ಯಾವುದಾದರೂ ಭಾಗದಿಂದ ಹೊಸ ಸಸಿಯನ್ನು ಬೆಳೆಸುತ್ತವೆ. ಕಬ್ಬು, ಗುಲಾಬಿ, ಅಂಜೂರ, ದಾಸವಾಳ ಮೊದಲಾದ ಗಿಡಗಳು ಕಾಂಡದ ಭಾಗದಿಂದ ಸಂತಾನಾಭಿವೃದ್ಧಿಯನ್ನು ಮಾಡುತ್ತವೆ. ಕಾಂಡದಲ್ಲಿರುವ ಕೊನರೇ ಅದರ ಸಂತತಿ! ಈ ಕೊನರು ತನ್ನ ಆಹಾರವನ್ನು ತಾನೇ ಸಿದ್ಧ ಪಡಿಸಿಕೊಳ್ಳಲಾರದು; ಚಳಿ, ಮಳೆ, ಗಾಳಿ ಮೊದಲಾದುವನ್ನು ಸಹಿಸಲಾರದು. ಆದುದರಿಂದ ತಾಯಿಸಸ್ಯ ಕೊನರಿಗೆ ಸಮೀಪದಲ್ಲಿಯೆ ಕಾಂಡದಲ್ಲಿ ಆಹಾರವನ್ನು ಸಂಗ್ರಹಿಸಿ, ಕೊನರಿನ ಸುತ್ತಲೂ ಒಂದು ಒರಟಾದ ಕವಚವನ್ನು ಬೆಳೆಸಿರುತ್ತದೆ. ಕೊನರುಳ್ಳ ಕಾಂಡದ ಭಾಗವನ್ನು ನೆಲದಲ್ಲಿ ನೆಟ್ಟಾಗ, ಹೊಸ ಸಸಿಯು ಬೆಳೆಯುವುದು. ಅದು ಎಳೆಯದಾಗಿರುವಾಗ ತಾಯಿ ಕೂಡಿಟ್ಟ ಆಹಾರವನ್ನು ಸೇವಿಸುವುದು.

ಆಲೂಗಡ್ಡೆಯ ಮೇಲೆ ಇರುವ ಕಣ್ಣುಗಳನ್ನು ನೀವು ನೋಡಿರಬಹುದು. ಅದರಲ್ಲಿರುವ ಕೊನರುಗಳೇ ಅದರ ಸಂತತಿ. ಒಂದು ಕಣ್ಣನ್ನು ಸ್ವಲ್ಪ ಗಡ್ಡೆಯ ಭಾಗದೊಡನೆ ಮಣ್ಣಿನಲ್ಲಿ ಹೂಳಿದರೆ ಮೊಳಕೆಯೊಡೆಯುತ್ತದೆ. ಆಗ ಅದಕ್ಕೆ ಆ ಕಣ್ಣಿನ ಹತ್ತಿರದ ಭಾಗದಲ್ಲಿ ತಾಯಿಸಸ್ಯ ಸಂಗ್ರಹಿಸಿಟ್ಟಿರುವ ಆಹಾರವು ಉಪಯೋಗವಾಗುತ್ತದೆ.

ಹೀಗೆಯೆ ಇನ್ನೂ ಅನೇಕ ಸಸ್ಯಗಳು, ಸಂತತಿಗೆ ಬೇಕಾದ ಆಹಾರವನ್ನು ತಮ್ಮ ದೇಹಭಾಗಗಳಲ್ಲಿ ಸಿದ್ಧಪಡಿಸುತ್ತವೆ. ಹೀಗೆ ಸಂಗ್ರಹಿಸಿಡುವಾಗ ತಾಯಿ ಸಸ್ಯ ಬಹಳ ಜಾಣತನವನ್ನು ತೋರಿಸುತ್ತದೆ. ತನ್ನ ಸಂತಾನದ ಪೋಷಣೆಗಾಗಿ ಗಡ್ಡೆ ಬೇರುಗಳಲ್ಲಿ ಆಹಾರವನ್ನು ಸಂಗ್ರಹಿಸುವ ಸಂದರ್ಭವಿದ್ದಲ್ಲಿ ಅದು ನೆಲದಲ್ಲಿಯ ನೀರಿನಿಂದ ಕರಗದಂತಹ ಆಹಾರವನ್ನು ಕೂಡಿಡುವುದು. ಸಕ್ಕರೆ ಯಂತಹ ನೀರಲ್ಲಿ ಕರಗುವ ಗುಣವುಳ್ಳ ಆಹಾರಪದಾರ್ಥವನ್ನು ಸಂಗ್ರಹಿಸುವ ಸಂದರ್ಭದಲ್ಲಿ, ನೆಲದಿಂದ ಮೇಲೆ ಇರುವ ತನ್ನ ದೇಹಭಾಗದಲ್ಲಿ ಅದನ್ನು ಕೂಡಿಡುವುದು. ಅನಿವಾರ್ಯವಾಗಿ ಸಕ್ಕರೆಯನ್ನು ಮಣ್ಣಿನಲ್ಲಿರುವ ಭಾಗದಲ್ಲಿ ಸಂಗ್ರಹಿಸಬೇಕಾಗಿ ಬಂದರೆ, ಅದರ ಸುತ್ತಲೂ ಬಲವಾದ ಪೊರೆಯನ್ನು ನಿರ್ಮಿಸಿ, ನೀರು ಪ್ರವೇಶಿಸದಂತೆ ಮಾಡುವುದು.



Get More Learning Materials Here : CLICK HERE www.studentbro.in

ಬೀಜಗಳಲ್ಲಿ ಆಹಾರಸಂಗ್ರಹಿಸುವಾಗಲೂ ಸಸ್ಯಗಳು ಒಳ್ಳೆಯ ವಿತರಣ ಚಾತುರ್ಯವನ್ನು ತೋರುತ್ತವೆ. ಸಣ್ಣ ಸಣ್ಣ ಬೀಜಗಳಾದರೆ, ಅವುಗಳಲ್ಲಿ ಹೆಚ್ಚು ಸತ್ವವುಳ್ಳ ಸಸಾರಜನಕ ಮೊದಲಾದ ಪದಾರ್ಥಗಳನ್ನೂ, ದೊಡ್ಡುವಾದರೆ ಪಿಷ್ಟ, ಮೇದಸ್ಸು, ಸಕ್ಕರೆ ಮೊದಲಾದ ಪದಾರ್ಥಗಳನ್ನೂ ಸಂಗ್ರಹಿಸುತ್ತವೆ. ಹೀಗೆ ಸಸ್ಯಗಳು ತೀರ ಸಣ್ಣ ಬೀಜಗಳಲ್ಲಿ ಬಹು ಸಾರವತ್ತಾದ ಆಹಾರಾಂಶವನ್ನು ಕೂಡಿಡುವುದನ್ನು ನೋಡಿದರೆ, ಅವುಗಳ ಸಂತಾನಪ್ರೀತಿಯು ಎಷ್ಟೊಂದು ಉತ್ಕಟವಾಗಿದೆಯೆಂಬುದು ಗೊತ್ತಾಗುವುದು.

ತಮ್ಮ ವಂಶವು ವಿಶಾಲವಾದ ಪ್ರದೇಶಗಳಲ್ಲಿ ಹರಡಬೇಕೆಂದು ಸಸ್ಯಗಳು ಆಶಿಸುತ್ತವೆ. ಬೀಜಗಳೆಲ್ಲ ಒಂದೇ ಸ್ಥಳದಲ್ಲಿ ಮೊಳೆತರೆ ಅವುಗಳಲ್ಲಿ ಸ್ಪರ್ಧೆ ಯುಂಟಾಗುವುದು; ತಕ್ಕಷ್ಟು ಸ್ಥಳದ ಅನುಕೂಲವಿಲ್ಲದೆ ಅವು ಸಾಯುವುವು. ತಾಯಿ ಸಸ್ಯಗಳು ಇದನ್ನು ತಡೆಗಟ್ಟಲು ಯತ್ನಿಸುತ್ತಿರುತ್ತವೆ. ಅದಕ್ಕಾಗಿ ಕೆಲವು ಸಸ್ಯಗಳು, ಬಲಿತ ಬೀಜಗಳನ್ನು ಬಹುದೂರದವರೆಗೂ ಚಿಮ್ಮಿ ಚೆಲ್ಲುತ್ತಿರುವವು. ಕೆಲವು ಸಸ್ಯಗಳ ಬೀಜಗಳಲ್ಲಿ ಪ್ರಾಣಿಗಳ ಮೈಗೆ ಅಂಟಿಕೊಳ್ಳುವ ಗುಣವಿರುತ್ತದೆ; ಆದರಿಂದ ಅವು ದೂರಪ್ರದೇಶಗಳಲ್ಲಿ ಹೋಗಿ ಬೀಳಲು ಅನುಕೂಲವಾಗುವುದು.

ತಾಯಿಸಸ್ಯ ಮೌನವಾಗಿ ಒಂದೆಡೆಯಿರುವ ಮೂಕಜೀವಿಯಾದರೂ, ತನ್ನ ಸಂತತಿಯ ಸಂವರ್ಧನೆಯನ್ನು ಕುರಿತು ಅನುಪಮವಾದ ಆಸಕ್ತಿಯನ್ನು ವಹಿಸಿರುತ್ತದೆ. ಪ್ರಕೃತಿಯು ನಿರ್ಮಿಸಿದ ಅನೇಕ ವಿಚಿತ್ರಗಳಲ್ಲಿ ಇದು ಒಂದು.

**ಶಬ್ದಗಳ ಅರ್ಥ:-**

ಕಾಪಾಡು – ರಕ್ಷಣೆ ಮಾಡು; ಗೋಚರ – ಕಣ್ಣಿಗೆ ಕಾಣುವುದು, ತಿಳುವಳಿಕೆ; ಒರಟು – ಬಿರುಸು, ಹುರಿಬರಕು; ಕೊನರು –ಚಿಗುರು; ಸಿದ್ಧಪಡಿಸು – ತಯಾರಿಸು; ಸಾರ – ರಸವುಳ್ಳ, ಅತ್ಯುತ್ತಮ; ಬಲಿತ – ಬೆಳೆದ, ಕೊಬ್ಬಿದ; ಚಿಮ್ಮು – ಬೀಸು, ಪುಟಿ, ನೆಗೆ

## ಅಭ್ಯಾಸ

**ಕೃತಿ 1) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

1) ......................................................................................................

**ಉತ್ತರ:** ......................................................................................................

2) ......................................................................................................

**ಉತ್ತರ:** ......................................................................................................

**ಕೃತಿ 2) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆ.**

1) ತಾಯಿ-ಸಸ್ಯದ ಸಂತಾನಪ್ರೇಮ ಹೇಗೆ ವ್ಯಕ್ತವಾಗುತ್ತದೆ?

**ಉತ್ತರ:** ......................................................................................................

......................................................................................................

......................................................................................................

......................................................................................................


2) ಬೀಜಗಳಲ್ಲಿ ಸಂತಾನಪ್ರೀತಿ ಹೇಗೆ ತೋರುತ್ತದೆ?


**ಉತ್ತರ:** ......................................................................................................




Get More Learning Materials Here : CLICK HERE www.studentbro.in

**ಕೃತಿ 3) ಕೆಳಗಿನ ಜಾಲಾಕೃತಿಗಳನ್ನು ಪೂರ್ಣ ಮಾಡಿರಿ.**




**ಕೃತಿ 4) ಕೊನೆಗೆ 'ರು' ಅಕ್ಷರ ಬರುವ ಬೇರೆ-ಬೇರೆ ಅರ್ಥಪೂರ್ಣ ಶಬ್ದಗಳನ್ನು ಬರೆಯಿರಿ.**

ಉದಾ. ಕೊನರು, – ಕೆಸರು.

ಉಸಿರು –


**ಉಪಕ್ರಮ :** ನಿಮಗೆ ಕಾಯಿ-ಪಲ್ಯದ ಬೀಜಗಳು ಬೇಕಾಗಿವೆ-ಒಕ್ಕಲುತನದ ಖಾತೆಯ ಅಧಿಕಾರಿಗಳಿಗೆ ಒಂದು ಮನವಿಯನ್ನು ಬರೆಯಿರಿ.

IKH9VZ



Get More Learning Materials Here : CLICK HERE www.studentbro.in

# 5. ಕುದುರೆಯೂ... ಸರದಾರನ ಗಡ್ಡವೂ...



ರಾಮಕೃಷ್ಣ ಎಷ್ಟು ಬುದ್ಧಿವಂತನೋ, ಅಷ್ಟೇ ಸ್ವಾಭಿಮಾನಿ ಕೂಡ. ತನ್ನ ಬಗ್ಗೆ ಯಾರಾದರು ಅವಹೇಳನಕಾರಿ ಮಾತುಗಳ ನ್ನಾಡಿದರೆ, ಆ ಕ್ಷಣದಲ್ಲಿ ಸಹಿಸಿಕೊಳ್ಳುತ್ತಿದ್ದನಾದರೂ, ಮುಂದೆ ಸಮಯಾವಕಾಶ ನೋಡಿ, ಅವಮಾನಿಸಿದವರಿಗೆ ಎದಿರೇಟು ಕೊಟ್ಟೇ ಬಿಡುತ್ತಿದ್ದ.

ಒಮ್ಮೆ ಹೀಗಾಯಿತು. ಅರಬಸ್ಥಾನದ ಕಾತೇವಾಡದಿಂದ ಒಬ್ಬ ಜಾಟ್ ಸರದಾರ ಹಲವು ಕುದುರೆ ಮರಿಗಳನ್ನು ತೆಗೆದುಕೊಂಡು ಕೃಷ್ಣದೇವರಾಯರ ಬಳಿ ಬಂದ. ನೋಡಲು ಅತಿ ಸುಂದರವೂ, ಸದೃಢಕಾಯದವೂ ಆಗಿದ್ದ ಅವುಗಳನ್ನು ನೋಡಿ, ಮಹಾರಾಜರಿಗೆ ಏನು ಅನಿಸತೊ, ಆಸ್ಥಾನಿಕರೆಲ್ಲರನ್ನು ಕರೆದು,

''ನಿಮಗೆಲ್ಲರಿಗೂ ಒಂದೊಂದು ಕುದುರೆ ಮರಿ ಕೊಡುತ್ತಿದ್ದೇವೆ. ತೆಗೆದುಕೊಂಡು ಹೋಗಿ. ನಿಮ್ಮಲ್ಲಿಯಾರು ಇವುಗಳನ್ನು ಅತ್ಯಂತ ಚೆನ್ನಾಗಿ ಸಾಕುತ್ತಾರೊ ಅವರಿಗೆ ಬಹುಮಾನ ಕೊಡಲಾಗುವದು'' ಎಂದು ಹೇಳಿದರು.

ಎಲ್ಲರೂ ತಮ್ಮ ತಮ್ಮ ಕುದುರೆ ಮರಿಗಳನ್ನು ಹಿಡಿದುಕೊಂಡರು. ತೆನ್ನಾಲಿ ರಾಮಕೃಷ್ಣನೂ ಒಂದು ಮರಿ ತೆಗೆದುಕೊಂಡ. ಹಿಂದೆ ಬೆಕ್ಕಿನ ಮರಿ ಸಾಕಿದ್ದ ಪರಿ ನೆನಪಾಗಿ,

''ಇದು ಕುದುರೆ ಮರಿ, ಬೆಕ್ಕಿನ ಮರಿ ಸಾಕಿದಂತಲ್ಲ, ನೆನಪಿರಲಿ'' ಎಂದರು ರಾಜರು ನಗುತ್ತ. ಆ ಮಾತಿಗೆ ಉಳಿದ ಪಂಡಿತರೂ ಗೊಳ್ಳೆಂದು ನಕ್ಕುಬಿಟ್ಟರು.



Get More Learning Materials Here : CLICK HERE www.studentbro.in

''ಮಹಾರಾಜರೇ, ಬ್ರಾಹ್ಮಣರೆಂದಾದರೂ ಕುದುರೆ ಸಾಕುವದುಂಟೆ? ಅವರೇನಿದ್ದರೂ ಆಕಳು ಸಾಕಲಿಕ್ಕೆ ಮಾತ್ರ ಲಾಯಕ್ಕು'' ಮೊಳ ಉದ್ದ ಗಡ್ಡ ಬಿಟ್ಟಿದ್ದ ಜಾಟ್ ಸರದಾರ ಮೂದಲಿಸಿದ.

ರಾಮಕೃಷ್ಣನಿಗೆ ಅವಮಾನವಾದರೂ, ಏನೂ ಮಾತಾಡಲಿಲ್ಲ. 'ಈ ಗಡ್ಡದ ಸರದಾರನಿಗೆ ಪಾಠ ಕಲಿಸಬೇಕು' ಅಂತ ಮನದಲ್ಲಿಯೇ ಅಂದುಕೊಂಡ.

ಎಲ್ಲರೂ ಒಳ್ಳೊಳ್ಳೆಯ ಮೇವು ಹಾಕಿ, ಹುರುಳಿ ತಿನ್ನಿಸಿ ಕುದುರೆಗಳನ್ನು ಬೆಳೆಸತೊಡಗಿದರು. ಅವು ಒಂದೊಂದು ಆನೆಗಳಂತೆ ಕೊಬ್ಬಿ ನಿಂತವು. ಹುಮ್ಮಸ್ಸಿನಿಂದ ಕೆನೆಯುತ್ತಿದ್ದವು.

ಆದರೆ ಇದಾವುದಕ್ಕೂ ತಲೆ ಕೆಡಿಸಿಕೊಳ್ಳದ ತೆನ್ನಾಲಿರಾಮ ನಿಶ್ಚಿಂತನಾಗಿದ್ದ. ಸುತ್ತಲೂ ನಾಲ್ಕು ಗೋಡೆ ನಿರ್ಮಿಸಿ ಅದರೊಳಗೆ ತನ್ನ ಕುದುರೆ ಮರಿಯನ್ನಿಟ್ಟು, ಮಧ್ಯದಲ್ಲಿ ಒಂದು ತೂತು ಮಾಡಿದ. ಆ ತೂತಿನ ಮೂಲಕವೇ ಕುದುರೆಗೆ ಹುಲ್ಲು-ನೀರು ಪೂರೈಕೆಯಾಗುತ್ತಿತ್ತು. ದಿನಕ್ಕೆ ನಾಲ್ಕು ಸಾರಿ ಹಿಡಿ ಹುಲ್ಲನ್ನು ಮಾತ್ರ ಅದಕ್ಕೆ ತಿನ್ನಿಸುತ್ತಿದ್ದ. ಅರೆಹೊಟ್ಟೆಯಲ್ಲಿಯೇ ಅದು ಬೆಳೆಯತೊಡಗಿತು.

ಕೆಲ ತಿಂಗಳು ಕಳೆದವು. ಎಲ್ಲ ಆಸ್ಥಾನಿಕರು ತಮ್ಮ ತಮ್ಮ ಕುದುರೆಗಳನ್ನು ತಂದು ತೋರಿಸುವಂತೆ ಮಹಾರಾಜರು ಆಜ್ಞಾಪಿಸಿದರು. ನಿರೀಕ್ಷೆಯಂತೆ ಅವರೆಲ್ಲರ ಕುದುರೆಗಳು ಮಿರಿ ಮಿರಿ ಮಿಂಚುತ್ತಿದ್ದವು. ಆದರೆ ತೆನ್ನಾಲಿರಾಮ ಮಾತ್ರ ಬರಿಗೈ ಭಂಟನಾಗಿ ಬಂದಿದ್ದ.

''ಎಲ್ಲಿ ನಿನ್ನ ಕುದುರೆ ರಾಮಕೃಷ್ಣ, ಕಾಣಿಸುತ್ತಲೇ ಇಲ್ಲವಲ್ಲ?'' ರಾಯರು ಕೇಳಿದರು.

''ಮಹಾರಾಜ, ನನ್ನ ಕುದುರೆ ಇವರೆಲ್ಲರಂತಲ್ಲ. ಮಹಾನ್ ಶಕ್ತಿಯುಳ್ಳದ್ದು. ಸಾಮಾನ್ಯರಿಗೆ ಅದನ್ನು ನಿಯಂತ್ರಿಸಲಾಗದು'' ಎಂದ ವಿನಿತನಾಗಿ.

''ಅದೇನು ಹುಲಿಯೋ... ಸಿಂಹವೋ...? ಎಂತೆಂಥ ಕುದುರೆಯನ್ನು ಪಳಗಿಸಿದವನು ನಾನು... ನಡೆಯಿರಿ ರಾಮಕೃಷ್ಣ ನೋಡಿಯೇ ಬಿಡೋಣ. ಆ ನಿಮ್ಮ ಕುದುರೆಯನ್ನು'' ತನ್ನ ಉದ್ದನೆಯ ಗಡ್ಡದ ಮೇಲೆ ಕೈಯಾಡಿಸುತ್ತ ಸರದಾರ ಹೇಳಿದ.

''ಆ ಕುದುರೆಗೆ ನಿಮ್ಮಂಥವರೇ ಸರಿ... ದಯಮಾಡಿಸು'' ಎಂದು ಸರದಾರನತ್ತ ನಗೆ ಬೀರಿ, ರಾಮಕೃಷ್ಣ ಆತನನ್ನು ತನ್ನ ಮನೆಯತ್ತ ಕರೆದೊಯ್ದ.

ಅಲ್ಲಿ ಬಂದು ನೋಡಿದರೆ ಕುದುರೆ ಲಾಯವೇ ಕಾಣಿಸಲೊಲ್ಲದು. ಸರದಾರ ಚಕಿತನಾಗಿ ತೆನ್ನಾಲಿಯತ್ತ ನೋಡಿದ. ರಾಮಕೃಷ್ಣ ಆತನನ್ನು ನಾಲ್ಕು ಗೋಡೆಗಳ ಕಡೆ ಕರೆದುಕೊಂಡು ಹೋದ, ಅಲ್ಲಿದ್ದ ಸಂದಿನಲ್ಲಿ ಇಣುಕಿ ನೋಡಿದರೆ ಕುದುರೆ ಕಾಣಿಸುತ್ತದೆ ಎಂದೂ ಹೇಳಿದ.

ಸರದಾರ ಸಂದಿನಲ್ಲಿ ಮುಖ ತೂರುತ್ತಿದ್ದಂತೆ, ಮುಖಕ್ಕಿಂತ ಮುಂಚೆ ಆತನ ಉದ್ದನೆಯ ಗಡ್ಡ ಸಂದಿಯಲ್ಲಿ ಸೇರಿತು. ಅಂದು ಹುಲ್ಲಿನ ದರ್ಶನವೇ ಆಗಿರದ ಆ ಕುದುರೆ, ಉದ್ದನೆಯ ಗಡ್ಡವೇ ಹುಲ್ಲೆಂದು ಭಾವಿಸಿ, ಹಲ್ಲಿನಿಂದ ಕಚ್ಚಿ ಹಿಡಿಯಿತು. ಗಾಬರಿಗೊಂಡ ಸರದಾರ ಕೂಗಾಡತೊಡಗಿದ. ಆದರೆ ಕುದುರೆ ಮಾತ್ರ ಇನ್ನಷ್ಟು ಗಟ್ಟಿಯಾಗಿ ಆತನ ಗಡ್ಡ ಕಚ್ಚಿ ಹಿಡಿಯಿತು.

''ಹೇಗಾದರೂ ಮಾಡಿ ನನ್ನ ಜೀವ ಉಳಿಸು'' ಸರದಾರ ಅಂಗಲಾಚಿದ. ತೆನ್ನಾಲಿ ಓಡೋಡುತ್ತ ಹೋಗಿ ಮಹಾರಾಜರಿಗೆ ನಿವೇದಿಸಿಕೊಂಡ- ''ಮಹಾಸ್ವಾಮಿ, ನನ್ನ ಕುದುರೆ ಸರದಾರನನ್ನು ಹಿಡಿದುಬಿಟ್ಟಿದೆ... ಐದಾರು ಸೈನಿಕರನ್ನು ಕಳಿಸಿಕೊಡಿರಿ.''

ರಾಜರಿಗೂ ಗಾಬರಿ. ಸೈನಿಕರೊಂದಿಗೆ ಅವರೂ ತೆನ್ನಾಲಿಯ ಮನೆಗೆ ಬಂದರು. ಗೋಡೆಯ ಸಂದಿಯಲ್ಲಿ ಮುಖ ಸಿಕ್ಕಿಸಿಕೊಂಡ ಜಾಟ್ ಸರದಾರ ನೋವಿನಿಂದ ಕೂಗಾಡುತ್ತಲೇ ಇದ್ದ.

''ರಾಮಕೃಷ್ಣ, ಈ ಸರದಾರನ ಕಷ್ಟ ನೋಡಲಾಗದು. ಏನಾದರೂ ಮಾಡಿ ಅವನನ್ನು ಅಪಾಯದಿಂದ ಪಾರುಮಾಡು'' ಮಹಾರಾಜರು ಕೇಳಿಕೊಂಡರು.



Get More Learning Materials Here : CLICK HERE www.studentbro.in

ಅದೇ ಸಂದಿನಲ್ಲಿ ಒಂದಿಷ್ಟು ಜಾಗ ಮಾಡಿಕೊಂಡು ರಾಮಕೃಷ್ಣ, ಹಿಡಿ ಹುಲ್ಲನ್ನು ಮುಂಚಾಚಿದ. ಆ ಹುಲ್ಲನ್ನು ಕಾಣುತ್ತಲೆ, ಕುದುರೆ ಗಡ್ಡದಿಂದ ಬಾಯಿ ಸಡಿಲಿಸಿ, ಹುಲ್ಲಿನತ್ತ ಚಾಚಿತು. 'ಸತ್ತೇನೊ.. ಬದುಕಿದೆನೊ...' ಎಂದು ಜಾಟ್ ಸರದಾರ ಮುಖ ಹಿಂತೆಗೆದು ಕೊಂಡು, ಮಹಾರಾಜರಿಗೆ ಅಡ್ಡಬಿದ್ದ.

''ನೋಡಿದಿರಾ ಸರದಾರಜಿ, ಬ್ರಾಹ್ಮಣರು ಹೇಗೆ ಕುದುರೆ ಸಾಕಬಲ್ಲರು...'' ತೆನ್ನಾಲಿ ನಗುತ್ತ ಹೇಳುತ್ತಿದ್ದರೆ...

''ಮಾಫ್ ಕರೋ ಭಾಯಿ...'' ಎರಡು ಕೈ ಜೋಡಿಸಿ, ಸರದಾರ ಕ್ಷಮೆಯಾಚಿಸಿದ.

ತೆನ್ನಾಲಿ ಸಾಕಿದ ಕುದುರೆಯೇ ಅತ್ಯಂತ ಬಲಶಾಲಿ ಎಂದು ತೀರ್ಮಾನಿಸಿದ ಮಹಾರಾಜರು, ಬಹುಮಾನ ನೀಡಿ ರಾಮಕೃಷ್ಣನನ್ನು ಗೌರವಿಸಿದರೆಂದು ಬೇರೆ ಹೇಳಬೇಕಾಗಿಲ್ಲ.


**ಶಬ್ದಗಳ ಅರ್ಥ:-**

ಕಾಯ - ದೇಹ, ಶರೀರ; ಪರಿ - ರೀತಿ, ಬಗೆ; ಲಾಯ - ಕುದುರೆ ಕಟ್ಟುವ ಸ್ಥಳ; ಗಾಬರಿ - ಬೆದರಿಕೆ; ಅಂಗಲಾಚು - ದೈನ್ಯದಿಂದ ಬೇಡಿಕೊಳ್ಳು.


## ಅಭ್ಯಾಸ

**ಕೃತಿ 1) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**

I.




II.






Get More Learning Materials Here : CLICK HERE www.studentbro.in

**ಕೃತಿ 2) ಕೆಳಗಿನ ವಿಧಾನಗಳನ್ನು ಪೂರ್ತಿಗೊಳಿಸಿರಿ.**

ಉದಾ. 1. ಕುದುರೆಯ <u>ಲಾಯ</u>

2. ಮೊಲದ [ಬಿಲ]

1) ಕೋಳಿಯ ........................................

2) ದನಗಳ ........................................

3) ಜೇನಿನ ........................................

4) ಹಾವಿನ ........................................

5) ಹುಲಿಯ ........................................

6) ಗಿಳಿಯ ........................................

**ಕೃತಿ 3) ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿರಿ.**

1) ರಾಮಕೃಷ್ಣನ ಗುಣವೈಶಿಷ್ಟ್ಯಗಳಾವವು?

ಉತ್ತರ: ..........................................................................................................................
..........................................................................................................................
..........................................................................................................................
..........................................................................................................................

2) ರಾಮಕೃಷ್ಣನಿಗೆ ಏಕೆ ಅವಮಾನವಾಯಿತು?

ಉತ್ತರ: ..........................................................................................................................
..........................................................................................................................
..........................................................................................................................
..........................................................................................................................

3) ತೆನ್ನಾಲಿ ರಾಮಕೃಷ್ಣನು ಕುದುರೆ ಮರಿಯನ್ನು ಯಾವ ರೀತಿಯಾಗಿ ಬೆಳೆಸಿದನು?

ಉತ್ತರ: ..........................................................................................................................
..........................................................................................................................
..........................................................................................................................
..........................................................................................................................

4) ಸರದಾರ ಗಾಬರಿಯಿಂದ ಏಕೆ ಕೂಗಾಡತೊಡಗಿದನು?

ಉತ್ತರ: ..........................................................................................................................
..........................................................................................................................
..........................................................................................................................
..........................................................................................................................



Get More Learning Materials Here : CLICK HERE www.studentbro.in

**ಕೃತಿ 4) ಕೆಳಗಿನ ಮಾತುಗಳನ್ನು ಯಾರು ಹೇಳಿದರು? ಎಂಬುದನ್ನು ಬರೆಯಿರಿ.**

ಉದಾ: ''ಇದು ಕುದುರೆ ಮರಿ, ಬೆಕ್ಕಿನ ಮರಿ ಸಾಕಿದಂತಲ್ಲ''

**ಉತ್ತರ:** ಈ ಮಾತನ್ನು ಕೃಷ್ಣದೇವರಾಯರು ಹೇಳಿದರು.

1) ''ಹೇಗಾದರೂ ಮಾಡಿ ನನ್ನ ಜೀವ ಉಳಿಸು.''

**ಉತ್ತರ:** ..........................................................................................

2) ''ರಾಮಕೃಷ್ಣ ಈ ಸರದಾರನ ಕಷ್ಟ ನೋಡಲಾಗದು''.

**ಉತ್ತರ:** ..........................................................................................

3) ''ಮಾಫ್ ಕರೋ ಭಾಯಿ''

**ಉತ್ತರ:** ..........................................................................................

**ಕೃತಿ 5) ಕುದುರೆಯ ಉಪಯೋಗಗಳನ್ನು ನಿನ್ನ ಮಾತುಗಳಲ್ಲಿ ಬರೆಯಿರಿ.**

**ಉತ್ತರ:** ..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

ಉಪಕ್ರಮ : 'ಅಕಬರ-ಬೀರಬಲ್ಲ' ಕಥೆಗಳನ್ನು ಸಂಗ್ರಹಿಸಿ ಓದಿರಿ.

IKR5XH



Get More Learning Materials Here : CLICK HERE www.studentbro.in

# 6. ಚಾಂದಬೀಬಿ



ಪ್ರಕೃತಿಯ ಆಡುಂಬೊಲವಾದ ಹೂದೋಟದಲ್ಲಿ ಅರಳಿದ ವಿವಿಧ ಕುಸುಮಗಳನ್ನು ಕಂಡು ಅವನ್ನು ಅಂದವಾಗಿ ತೂಲಿಕೆಯಿಂದ ರೇಖಿಸುವ, ವೀಣೆಯನ್ನು ನುಡಿಸಿ ಅದರೊಂದಿಗೆ ತನ್ನ ಮಧುರವಾದ ಕಂಠಧ್ವನಿಯನು ಮೇಳೈಸಿ ವಾತಾವರಣವನ್ನು ಗೀತದ ಅಲೆಗಳಿಂದ ತುಂಬುವ ಕಲಾವಿದೆ ಚಾಂದಬೀಬಿ. ಅರಬಿ, ಪಾರ್ಸಿ ಮೊದಲಾದ ಭಾಷೆಗಳಲ್ಲಿ ಅಪಾರ ಪಾಂಡಿತ್ಯವನ್ನು ಗಳಿಸಿ ಮಾನಸಿಕ ಹಾಗೂ ಬೌದ್ಧಿಕ ಶಕ್ತಿಗಳನ್ನು ಮೈಗೂಡಿಸಿಗೊಂಡವಳು ಚಾಂದಬೀಬಿ. ಇವನ್ನು ಮೀರಿ ನಿಲ್ಲುವಂತೆ ಆಕೆಯು ಯುದ್ಧ ವಿದ್ಯೆಯಲ್ಲಿಯೂ ಕುದುರೆಯ ಹತ್ತುವುದರಲ್ಲಿಯೂ ಪಳಗಿದ್ದವಳಿದ್ದು ತನ್ನವರನ್ನು ನಿಬ್ಬೆರ ಗಾಗಿಸಿದ ನಿಪುಣೆಯಾಕೆ!

ಇಂದಿಗೆ ಸುಮಾರು ಮೂರುವರೆ ನೂರು ವರ್ಷಗಳ ಹಿಂದೆ ಅಹಮ್ಮದ ನಗರವನ್ನಾಳುತ್ತಿದ್ದ ನಿಜಾಮಶಹನ ಮಗಳಾಗಿ ಚಾಂದಬೀಬಿ ಜನಿಸಿದಳು. ಚೆಲುವಿನಾಗರದಂತಿದ್ದ ಬೀಬಿಯು ಬಾಲ್ಯದಲ್ಲಿ ತನ್ನ ಸೌಂದರ್ಯದಿಂದ ಮುದ್ದು ಮಾತುಗಳಿಂದ, ತಂದೆತಾಯಿಗಳ ಹೃದಯವನ್ನು ಗೆದ್ದಳು. ಚಾಂದಬೀಬಿಯು ಅರಮನೆಯಲ್ಲಿ ಸಕಲ ಸುಖಗಳನ್ನನುಭವಿಸುತ್ತ ದಿನದಿಂದ ದಿನಕ್ಕೆ ಬೆಳೆಯುತ್ತ ಯೌವನಕ್ಕೆ ಕಾಲಿರಿಸಿದಳು. ಬಹು ದಿನಗಳಿಂದಲೇ ಬಿಜಾಪುರದೊಂದಿಗೆ ಸ್ನೇಹ ಸಂಬಂಧವನ್ನು ಕುದುರಿಸಿಕೊಳ್ಳಬೇಕೆಂದು ಬಗೆದಿದ್ದ ಶಹನು ಈ ಕುರಿತು ಯುಕ್ತ ಯೋಜನೆಗಳನ್ನು ಮಾಡಿ ತನ್ನ ಮುದ್ದು ಮಗಳನ್ನು ವಿಜಾಪುರದ ಅಲಿ ಆದಿಲ ಶಹನಿಗೆ ವಿವಾಹ ಮಾಡಿಕೊಟ್ಟನು.

ತನ್ನ ಪತ್ನಿಯನ್ನು ಅತಿಯಾಗಿ ಮೆಚ್ಚಿದ್ದ ಶಹನು ಬೀಬಿಯ ಬಯಕೆಯಂತೆ ಅಂತ:ಪುರದ ಏಕಾಂತವಾಸವನ್ನು ಆಕೆಯಿಂದ ವಿರಹಿತಗೊಳಿಸಿ ತನ್ನ ಜತೆಯಲ್ಲಿ ಎಲ್ಲೆಡೆಯಲ್ಲೂ ಇರಗೊಟ್ಟನು. ಈ ಸೌಲಭ್ಯವನ್ನು ಹೊಂದಿದ ಚಾಂದಬೀಬಿ ರಾಜದರ್ಬಾರಿನಲ್ಲಿ, ರಾಯಭಾರಿಗಳ ಸಂದರ್ಶನ ಕಾಲದಲ್ಲಿ ಪತಿಯ ಜತೆಯಲ್ಲಿದ್ದು ಆಡಳಿತ ಸೂತ್ರಗಳೆಲ್ಲವನ್ನೂ ಅರಿತು 'ಸಹಭಾಗಿನಿ' ಎಂಬ ಹೆಸರನ್ನು ಅನ್ವರ್ಥಗೊಳಿಸಿದಳು' ಮಾತ್ರವಲ್ಲ ತಾನರಿತ ರಾಜ್ಯ ತಂತ್ರಗಳನ್ನು ತಕ್ಕ ಸಂದರ್ಭಗಳಲ್ಲಿ ಗಂಡನೊಂದಿಗೆ ಸೇರಿ ಪ್ರಜಾಹಿತಕ್ಕಾಗಿ ಬಳಸಿ ಪ್ರಜೆಗಳ ಮೆಚ್ಚಿಕೆಗೂ ಪಾತ್ರಳಾದಳು.

ವರ್ಷಗಳು ದಾಟಿದವು. ಚಾಂದಬೀಬಿಯ ಕಾರ್ಯಚತುರತೆಯು ಬಿಜಾಪುರದ ಚರಿತ್ರೆಯಲ್ಲಿ ನೂತನಾಧ್ಯಾಯವನ್ನು ತೆರೆದು ಸರ್ವತ್ರ ಸುಖ ಸೌಕರ್ಯಗಳನ್ನು ಒದಗಿಸಿತು. ಪ್ರಜೆಗಳು ನೆಮ್ಮದಿಯಲ್ಲಿದ್ದರು.



Get More Learning Materials Here : CLICK HERE www.studentbro.in

ಆದರೆ ಚಾಂದಬೀಬಿಯ ದೈವವು ಈ ಸುಖಮಯ ಸಂಸಾರವನ್ನು ಹೆಚ್ಚುಕಾಲ ಇರಗೊಡಲಿಲ್ಲ. ಅಲಿ ಆದಿಲಶಹನು ಅಕಸ್ಮಾತ್ತಾಗಿ ಮರಣ ಹೊಂದಿದನು. ಚಾಂದಬೀಬಿ ದುಃಖ ಸಂತಪ್ತೆಯಾದಳು.

ಚಾಂದಬೀಬಿ ಹೆಚ್ಚು ಹೊತ್ತು ಎದೆಗೆಟ್ಟು ಕುಳಿತಿರಲಿಲ್ಲ. ಪ್ರಜೆಗಳ ಹಿತವೇ ತನ್ನ ಹಿತವೆಂದು ಬಗೆದ ಆ ದಯಾರ್ದ್ರೆಯು ಪತಿಯ ತಮ್ಮನ ಮಗನಾದ ಇಬ್ರಾಹಿಂ ಶಹನನ್ನು ಪಟ್ಟಕ್ಕೇರಿಸಿದಳು. ಆತನಿನ್ನೂ ಚಿಕ್ಕವನಾದುದರಿಂದ ಚಾಂದಬೀಬಿಯು ರಾಜಕಾರ್ಯವನ್ನು ತಾನೇ ನಿರ್ವಹಿಸಿದಳು.

ಕರಾಳ ದುರ್ವಿಧಿಯು ಬೀಬಿಯ ಬೆನ್ನು ಬಿಡಲೇ ಇಲ್ಲ. ಅರಸನು ಚಿಕ್ಕವನು, ಆಡಳಿತ ಸಾಗಿಸುವವಳು ಹೆಣ್ಣು! ಎಂದು ಒಳಗೊಳಗೇ ಕುದಿಯುತ್ತಿದ್ದ ಸರದಾರರಲ್ಲಿ ಅನೇಕರು ಕುತಂತ್ರಗಳನ್ನು ಹೂಡಿ ಆಡಳಿತಕ್ಕೆ ಆತಂಕವನ್ನುಂಟುಮಾಡಿದರು. ನೆರೆ ಹೊರೆಯ ರಾಜರುಗಳನ್ನು ಪ್ರೇರೇಪಿಸಿ ಬಿಜಾಪುರಕ್ಕೆ ಮುತ್ತಿಗೆ ಹಾಕಿಸಿದರು. ಚಾಂದಬೀಬಿ ಅಳುಕಲಿಲ್ಲ; ಎದೆಗೆಡಲಿಲ್ಲ. ರಾಜ್ಯ ದ್ರೋಹಿಗಳಿಗೆ ಒಂದು ಪಂಥಾಹ್ವಾನವನ್ನಿತ್ತು ಹೋರಾಡಿದಳು. ಬಿಜಾಪುರವನ್ನು ಉರಿಸಲು ಬಂದಿದ್ದ ಕಿಚ್ಚು ವೀರನಾರಿ ಚಾಂದಬೀಬಿಯ ಮುಂದೆತಣ್ಣಗಾಯಿತು. ನೆರೆಹೊರೆಯ ರಾಜರು ಸೋತು ಹಿಂತೆರಳಿದರು ಮಾಡಿದ ತಪ್ಪಿಗೆ ಕ್ಷಮೆಯನ್ನು ಯಾಚಿಸಿ ದ್ರೋಹಿಗಳಾದ ಸರದಾರರು ಮಣಿದರು. ಉದಾರ ಗುಣ ಸಂಪನ್ನೆ ಯಾದ ಆಕೆ, ಅವರನ್ನು ಕ್ಷಮಿಸಿದಳು. ಕವಿದು ಬಂದ ಅಶಾಂತಿಯ ಮೋಡ ಚೆದುರಿ, ರಾಜ್ಯದಲ್ಲಿ ಪುನಃ ಶಾಂತಿಯು ನೆಲೆಗೊಂಡಿತು. ಇಬ್ರಾಹಿಮನು ಬೆಳೆದು ದೊಡ್ಡವನಾದನು. ರಾಜ್ಯ ಸೂತ್ರಗಳನ್ನು ತಾನೇ ವಹಿಸಿಕೊಂಡನು. ಆಡಳಿತವು ನಿರಂತಕವಾಗಿ ಸಾಗಿತು.

ಚಾಂದಬೀಬಿಯು ಬಾಳಿನಲ್ಲಿಮತ್ತೊಂದು ಸಮಸ್ಯೆಯನ್ನು ಎದಿರಿಸಬೇಕಾಗಿ ಬಂತು ಅಹಮ್ಮದ ನಗರದಲ್ಲಿ ಅನಿರೀಕ್ಷಿತವಾಗಿ ದಂಗೆಯೊಂದು ಎದ್ದಿತು. ಅಲ್ಲಿಗೆ ಮಂತ್ರಿಯಾಗಿದ್ದ 'ಮಿಯಾನ್ ಮಂಜೂ' ಎಂಬುವನು ನ್ಯಾಯವಾಗಿ ಹೋಗಬೇಕಾಗಿದ್ದ ಸಿಂಹಾಸನದ ಅಧಿಕಾರವನ್ನು ಹಕ್ಕುದಾರನಿಂದ ತಪ್ಪಿಸಿ ಇನ್ನೊಬ್ಬನನ್ನು ಪಟ್ಟಕ್ಕೇರಿಸಿದನು ಮಾತ್ರವಲ್ಲ ಉತ್ತರಾಧಿಕಾರಿಯನ್ನು ಸೆರೆಗೆ ತಳ್ಳಿದನು. ಇದು ಪ್ರಜೆಗಳ ಮನಸ್ಸನ್ನು ಕಲಕಿತು. ಅವರು ಒಮ್ಮತದ ನಿರ್ಧಾರಕ್ಕೆ ಬಂದು ಚಾಂದಬೀಬಿಯ ಸಹಾಯವನ್ನು ರಹಸ್ಯವಾಗಿ ಕೋರಿದರು. ನ್ಯಾಯದ ಹೋರಾಟಕ್ಕಾಗಿ ಆ ಧೀರ ಮಹಿಳೆ ಸಿದ್ಧಳಾಗಿ ಅಹಮ್ಮದ ನಗರಕ್ಕೆ ತೆರಳಿ ಸರದಾರರ ನಾಯಕಿಯಾದಳು

ಮಿಯಾನ್ ಮಂಜು ವಿಚಾರವನ್ನರಿತು ತನಗೆ ಸಹಾಯ ನೀಡಲು ದಿಲ್ಲಿಯ ಮೊಗಲ ಬಾದಶಹ ಅಕ್ಬರನ ನೆರವನ್ನು ಕೋರಿದನು. ಅಕ್ಬರನು ತನ್ನ ಮಗ ಮುರಾದನನ್ನು ಸೈನ್ಯದೊಂದಿಗೆ ಕಳುಹಿಸಿದನು. ಮುರಾದ ಸೇನೆ ಅಹಮ್ಮದ ನಗರವನ್ನು ಆಕ್ರಮಿಸಿತು. ಚಾಂದಬೀಬಿಯು ಪ್ರಾಣವನ್ನು ಪಣವಿಟ್ಟು ಅಹಮ್ಮದ ನಗರದ ಭದ್ರತೆಗಾಗಿ ಕಂಕಣಬದ್ಧರಾದ ಸರದಾರೊಂದಿಗೆ ಕಾಳಗಕ್ಕೆ ಅಣಿಯಾದಳು. ಘನಘೋರ ಯುದ್ಧ ಮುಸುಕಿತು.

ರಣ ಚಂಡಿಯಂತೆ ಚಾಂದಬೀಬಿ ಹೋರಾಡಿದಳು. ಅರಿಗಳ ರುಂಡಗಳನ್ನು ಚೆಂಡಾಡಿದಳು. ರಕ್ತದ ಕಾಲುವೆ ಹರಿಯಿತು. ಹೆಣಗಳ ರಾಶಿಯೇರಿತು. ನಿಮಿಷದಿಂದ ನಿಮಿಷಕ್ಕೆ ಕಡಿಮೆಯಾಗುತ್ತಿದ್ದ ತನ್ನ ಸೈನಿಕರನ್ನು ಕಂಡು ಮುರಾದನು ಉಪಾಯ ಗಾಣದೆ ಬಂದ ದಾರಿಯಲ್ಲಿಯೇ ಹಿಂದಿರುಗಿದನು.

ಆ ಬಳಿಕ ಚಾಂದಬೀಬಿಯು ಸೆರೆಯಲ್ಲಿದ್ದ ಹಕ್ಕುದಾರನನ್ನು ಬಿಡಿಸಿ ಅವನನ್ನು ರಾಜ್ಯಕ್ಕೊಡೆಯನನ್ನಾಗಿ ಮಾಡಿ ಅಹಮ್ಮದ ನಗರದಲ್ಲಿ ಪುನಃ ಶಾಂತಿಯನ್ನು ಸ್ಥಾಪಿಸಿದಳು.

ಅಹಮ್ಮದ ನಗರದಲ್ಲಾದ ಸೋಲು ಮೊಗಲರ ಮನದಿಂದ ಅಳಿದಿರಲಿಲ್ಲ. ಮುಂದೆ ನಾಲ್ಕು ವರ್ಷಗಳಲ್ಲೆ ಮತ್ತೊಮ್ಮೆ ಮೊಗಲರ ಆಕ್ರಮಣವಾಯಿತು. ಆದರೆ ರಾಜ್ಯದಲ್ಲಿದ್ದ ವಿರೋಧಿ ಪಕ್ಷದ ಒಳ ಸಂಚನ್ನರಿತಿದ್ದ ಚಾಂದಬೀಬಿ, ರಕ್ತಪಾತವನ್ನು ಬಯಸದೆ ಮೊಗಲರೊಡನೆ ಸಂಧಿಗಾಗಿ ಯತ್ನಿಸಿ ಪತ್ರವೊಂದನ್ನು ಮೊಗಲ ಸೇನಾಪತಿಗೆ ಕಳುಹಿಸಿದಳು ಆದರೆ ಆ ಪತ್ರವು ಪ್ರಮಾದವಶಾತ್ ಸೇನಾಪತಿಯ ಕೈಸೇರದ ವಿರೋಧಿ ಪಕ್ಷದವರಿಗೆ ದೊರಕಿತು. ಈ ಪತ್ರದ ದುರುಪಯೋಗವನ್ನು ಮಾಡಿಕೊಂಡ ವಿರೋಧಿಗಳು ಜನತೆಯಲ್ಲಿ ಚಾಂದಬೀಬಿಯ ಕುರಿತಾದ ಅಪಪ್ರಚಾರವನ್ನು ನಡೆಸಿ ಆಕೆಯನ್ನು ಕೊಲೆ ಮಾಡಿಸಿದರು. ಚಾಂದಬೀಬಿ ಜನರ ಅವಿವೇಕದ ಸುಳಿಯಲ್ಲಿ ಸಿಕ್ಕು ತನ್ನ ಅಸು ನೀಗಬೇಕಾಯಿತು.

'ಕೆಟ್ಟ ಮೇಲೆ ಬುದ್ಧಿ' ಎಂಬಂತೆ ಚಾಂದಬೀಬಿಯ ಮರಣಾ ನಂತರದಲ್ಲಿ ಜನರಿಗೆ ತಮ್ಮ ಅವಿವೇಕದ ಅರಿವಾಯಿತು. ಆದರೆ ಮಾಡುವುದೇನು? ಅದಾಗಲೇ ಅಹಮ್ಮದ ನಗರದ ಹಾಗೂ ವಿಜಾಪುರದ ಮನೆತುಂಬ ಬೆಳಕಾಗಿದ್ದ ಜ್ಯೋತಿಯು ಈ ಲೋಕದಿಂದ ಮರೆಯಾಗಿತ್ತು. ಆ ಧೀರ ಮಹಿಳೆ, ನಿತ್ಯ ಶಾಂತಿಯಲ್ಲಿ ಲೀನವಾಗಿದ್ದಳು.



Get More Learning Materials Here : CLICK HERE www.studentbro.in

**ಶಬ್ದಗಳ ಅರ್ಥ:**

ಕುದುರಿಸು – ಸುಧಾರಿಸು, ಬೆಳೆಸು; ಕುತಂತ್ರ – ಕೆಟ್ಟ ವಿಚಾರ, ದುರಾಲೋಚನೆ; ಅಣಿ – ಸಿದ್ಧತೆ, ಅರಿ – ವೈರಿ, ಶತ್ರು

## ಅಭ್ಯಾಸ

**ಕೃತಿ 1)** **ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ಚಾಂದಬೀಬಿಯು ಯಾವ ಯಾವ ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಪಡೆದಿದ್ದಳು?

ಉತ್ತರ: ..................................................................................................

..................................................................................................

2) ಚಾಂದಬೀಬಿಯು ತಂದೆತಾಯಿಗಳ ಹೃದಯವನ್ನು ಹೇಗೆ ಗೆದ್ದಳು?

ಉತ್ತರ: ..................................................................................................

..................................................................................................

3) ನೆರೆಹೊರೆಯ ರಾಜರುಗಳು ಬಿಜಾಪುರಕ್ಕೆ ಮುತ್ತಿಗೆ ಹಾಕಲು ಕಾರಣವೇನು?

ಉತ್ತರ: ..................................................................................................

..................................................................................................

**ಕೃತಿ 2)** **ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಮೂರು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

1) ..................................................................................................

ಉತ್ತರ: ..................................................................................................

2) ..................................................................................................


ಉತ್ತರ: ..................................................................................................

3) ..................................................................................................

ಉತ್ತರ: ..................................................................................................

**ಕೃತಿ 3)** **ಕೆಳಗಿನ ಜಾಲಾಕೃತಿ ಪೂರ್ಣಗೊಳಿಸಿರಿ.**


(I






Get More Learning Materials Here : CLICK HERE www.studentbro.in

(II




**ಕೃತಿ 4)** **ವರ್ಗದಲ್ಲಿ ಗೆಳೆಯರೊಂದಿಗೆ/ಗುರುಗಳೊಂದಿಗೆ ಚರ್ಚಿಸಿ ಮಾಹಿತಿ ದೊರಕಿಸಿ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ.**

| 'ಅ' ಭಾಗ | 'ಬ' ಭಾಗ |
|---|---|
| 1) ತಾಜಮಹಲ | (ಅ) ವಿಜಯಪುರ (ವಿಜಾಪುರ) |
| 2) ಗೋಲಗುಂಬಜ್ | (ಬ) ಹೈದ್ರಾಬಾದ |
| 3) ಕುತುಬಮಿನಾರ್ | (ಕ) ಆಗ್ರಾ |
| 4) ಚಾರಮಿನಾರ | (ಡ) ದಿಲ್ಲಿ |

**ಉಪಕ್ರಮ :** ಶಾಲೆಯ ಗ್ರಂಥಾಲಯದಿಂದ ಬೇರೆ-ಬೇರೆ ಭಾರತೀಯ ವೀರಮಹಿಳೆಯರ ಚರಿತ್ರೆಯ ಪುಸ್ತಕಗಳನ್ನು ಪಡೆದು ಓದಿರಿ. ಮತ್ತು ಟಿಪ್ಪಣೆ ಪುಸ್ತಕದಲ್ಲಿ ಬರೆಯಿರಿ.

**ಸೂಚನೆ:** ಬಿಜಾಪೂರ ಎಂಬ ಹೆಸರು ಈಗ ವಿಜಯಪುರ ಎಂದು ಮರುನಾಮಕರಣವಾಗಿದೆ.



Get More Learning Materials Here : CLICK HERE www.studentbro.in

# 7. ಶಿಕ್ಷಕರ ದಿನಾಚರಣೆ



ಡಾ|| ಸರ್ವಪಲ್ಲಿ ರಾಧಾಕೃಷ್ಣನ್, ಶಿಕ್ಷಣ ಸಂಸ್ಕೃತಿಯ ಹರಿಕಾರ. ಭಾರತದ ಮಹಾನ್ ತತ್ವಜ್ಞಾನಿ, ವೇದಾಂತಿ ಉನ್ನತ ರಾಜನೀತಿಜ್ಞ, ಮೇರು ಶಿಕ್ಷಕ, ಡಾ|| ಎಸ್. ರಾಧಾಕೃಷ್ಣನ್ ತಮ್ಮ ಸುದೀರ್ಘ ಜೀವಿತಾವಧಿಯಲ್ಲಿ ಭಾರತ ಸಂಸ್ಕೃತಿಯ ಹರಿಕಾರರಾಗಿ ಮೆರೆದು, ಭಾರತದ ಕೀರ್ತಿಯನ್ನು ವಿಶ್ವಾದ್ಯಂತ ಹರಡಿದರು. ಸೆಪ್ಟೆಂಬರ್ 5 ರಂದು ಡಾ|| ರಾಧಾಕೃಷ್ಣನ್ ರವರ ಜನ್ಮದಿನವನ್ನು ''ಶಿಕ್ಷಕರ ದಿನವನ್ನಾಗಿ'' ಪ್ರತಿ ವರ್ಷವೂ ಆಚರಿಸಲಾಗುತ್ತಿದೆ.

ಡಾ|| ಎಸ್. ರಾಧಾಕೃಷ್ಣನ್‌ರು ತಮಿಳುನಾಡಿನ ಚಿತ್ತೂರು ಜಿಲ್ಲೆಯ ತಿರುತ್ತಣಿ ಕ್ಷೇತ್ರದಲ್ಲಿ 1888 ಸಪ್ಟೆಂಬರ್ 5 ರಂದು ಜನಿಸಿದರು. ಸರ್ವಪಲ್ಲಿ ವೀರಸ್ವಾಮಿ ಮತ್ತು ಸೀತಮ್ಮ ದಂಪತಿಗಳಿಗೆ ಎರಡನೆಯ ಮಗ. ರಾಧಾಕೃಷ್ಣನ್ ಮನೆತನ ಮೂಲತಃ ಆಂಧ್ರದ ನೆಲ್ಲೂರ ಜಿಲ್ಲೆಯ ಸರ್ವಪಲ್ಲಿಯವರು ಸರ್ವಪಲ್ಲಿ ಎಂಬುವುದು ಮನೆತನದ ಹೆಸರು. ವೀರಸ್ವಾಮಿ ತಹಶೀಲ್ದಾರ್ ಕಛೇರಿಯಲ್ಲಿ ಕಾರಕೂನರಾಗಿದ್ದರು. ಹಣಕಾಸಿನ ಪರಿಸ್ಥಿತಿಯೇನು ಅಷ್ಟೇನೂ ಉತ್ತಮವಿರಲಿಲ್ಲ. ದೇವರಲ್ಲಿ ಭಕ್ತಿ. ಆಧ್ಯಾತ್ಮಿಕತೆಯಲ್ಲಿ ನಂಬಿಕೆ ಇಟ್ಟಿದ್ದ ಬಾಲಕ ರಾಧಾಕೃಷ್ಣನ್ ಅಭ್ಯಾಸದಲ್ಲಿ ತುಂಬ ಏಕಾಗ್ರತೆಯುಳ್ಳವರಾಗಿದ್ದರು. ತಿರುತ್ತಣಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಪೂರೈಸಿದ ನಂತರ ತಿರುಪತಿಯ ಲೊಥರ್ ಮಿಷನ್ ಸ್ಕೂಲಿನಲ್ಲಿ ಹೈಸ್ಕೂಲು ವಿದ್ಯಾಭ್ಯಾಸ ಮಾಡಿದರು.

ಮದ್ರಾಸ್ ವಿಶ್ವವಿದ್ಯಾಲಯದಿಂದ 1909ರಲ್ಲಿ ಎಂ. ಎ ಪದವಿಪಡೆದ ನಂತರ ಮದ್ರಾಸಿನ ಪ್ರಸಿದ್ಧ ಕಾಲೇಜೊಂದರಲ್ಲಿ ತತ್ವಶಾಸ್ತ್ರದ ಅಧ್ಯಾಪಕರಾಗಿ ನೇಮಕರಾದರು. ಮುಂದೆ ಅದೇ ಕಾಲೇಜಿನಲ್ಲಿ ಪ್ರಾಚಾರ್ಯರೂ ಆದರು 1926 ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಿಂದ ''ಡಿಲಿಟ್'' ಪದವಿ ಪಡೆದ ಅವರು, ದೇಶದ ವಿವಿಧ ಶಿಕ್ಷಣ ಸಂಸ್ಥೆಯಲ್ಲಿ ವಿಶ್ವವಿದ್ಯಾಲಯಗಳಲ್ಲಿ ಉಪಕುಲಪತಿಗಳಾಗಿ ಸೇವೆಸಲ್ಲಿಸಿದರು.

ತತ್ವಶಾಸ್ತ್ರದಲ್ಲಿ ರಾದಾಕೃಷ್ಣರ್‌ನಂತೆ ಸಾಧನೆ ಗೈದವರು ತುಂಬಾ ವಿರಳ. ಅವರು ಭಾರತೀಯ ತತ್ವಜ್ಞಾನ ಪರಿಷತ್ತಿನ ಅಧ್ಯಕ್ಷರು ಆಗಿದ್ದರು. ಭಾರತೀಯ ತತ್ವಶಾಸ್ತ್ರಕ್ಕೆ ವಿಶ್ವದಲ್ಲಿ ವಿಶಿಷ್ಟ ಸ್ಥಾನ ಗಳಿಸಿಕೊಟ್ಟ ಮಹಾಮೇಧಾವಿಗಳಲ್ಲಿ ಮುಂಚೂಣಿಯಲ್ಲಿದ್ದವರು.

ಬ್ರಿಟಾನಿಯಾ ಜ್ಞಾನಕೋಶಕ್ಕೆ ಭಾರತೀಯ ತತ್ವಶಾಸ್ತ್ರದ ಮೌಲಿಕ ಲೇಖನ ರಚಿಸಿದ ಹಿರಿಮೆ ಅವರದು. ಡಾ|| ರಾಧಾಕೃಷ್ಣನ್‌ರು ತಮ್ಮ ವಿದ್ವತ್‌ಪೂರ್ಣ ಲೇಖನಗಳಿಂದ ಪಾಂಡಿತ್ಯಪೂರ್ಣ ಉಪನ್ಯಾಸಗಳಿಂದ ಭಾರತೀಯ ತತ್ವಶಾಸ್ತ್ರದ ಪ್ರಕಾಶನವನ್ನು ವಿದೇಶಿಯರ ಮನದಂಗಳದಲ್ಲಿ ಬಿಂಬಿಸಿದರು.

ಡಾ|| ರಾಧಾಕೃಷ್ಣನ್ ಉತ್ತಮ ವಾಗ್ಮಿ. ಅವರ ಉಪನ್ಯಾಸ ಶೈಲಿ ಅತ್ಯಂತ ಜನಾಕರ್ಷಣೆಯವಾಗಿತ್ತು. ಅವರ ಉಪನ್ಯಾಸಗಳು ಎಷ್ಟೊಂದು ಪಾಂಡಿತ್ಯಪೂರ್ಣಗಳಾಗಿದ್ದವು ಎಂದರೆ ವಿದೇಶಿಯರೇ ಅವರ ಉಪನ್ಯಾಸಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಲು ಮುಂದೆ ಬಂದರು. ಆಕ್ಸ್‌ಫರ್ಡ ವಿಶ್ವವಿದ್ಯಾಲಯದಲ್ಲಿ ಅಮೇರಿಕದ ಹಾರ್ವರ್ಡ ವಿಶ್ವವಿದ್ಯಾಲಯದಲ್ಲಿ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಅವರು ಉಪನ್ಯಾಸ ನೀಡಿದ್ದು ಇಲ್ಲಿ ಉಲ್ಲೇಖನೀಯ ಅವರ ಭಾರತೀಯ ತತ್ವಶಾಸ್ತ್ರ ಕೃಷಿ ತತ್ವಜ್ಞಾನದಲ್ಲೊಂದು ಮೈಲಿಗಲ್ಲು.



Get More Learning Materials Here : CLICK HERE www.studentbro.in

ವಿಶ್ವವಿದ್ಯಾಲಯಗಳ ಶಿಕ್ಷಣದಲ್ಲಿ ಸಮಗ್ರ ಬದಲಾವಣೆತರಲು ಡಾ॥ ರಾಧಾಕೃಷ್ಣನ್‌ರನ್ನು ಶಿಕ್ಷಣ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ವಿಶ್ವವಿದ್ಯಾಲಯದ ಶಿಕ್ಷಣದ ಲೋಪ – ದೋಷಗಳಿಗೆ ಬೆಳಕು ಚೆಲ್ಲಿದ ಅವರು ಆಗಬೇಕಾದ ಬದಲಾವಣೆಗಳಿಗಾಗಿ ಕೈಕೊಳ್ಳಬೇಕಾದ ಯೋಜನೆಯ ವಿವರ ಸಲ್ಲಿಸಿದರು.

1916 ರಲ್ಲಿ ರಾಜ ಮಹೇಂದ್ರಿಯ ಸರಕಾರ ಕಲಾ ಕಾಲೇಜಿನಲ್ಲಿ ಪ್ರೊಫೆಸರ್ ಆಗಿ ನೇಮಕವಾದರು. ರಾಧಾಕೃಷ್ಣನ್ ಈ ಸಂದರ್ಭದಲ್ಲಿಯೇ ತನ್ನ ಅಪಾರ ವಿದ್ವತ್ತಿನಿಂದ ವಿದ್ಯಾರ್ಥಿಗಳ ಮೇಲೆ ವಿಶೇಷ ಪ್ರಭಾವ ಬೀರಿದ ಅವರು, ಟಾಗೋರ್ ಅವರ ತತ್ವಜ್ಞಾನ ಎಂಬ ಉನ್ನತ ಮಟ್ಟದ ಜ್ಞಾನಾಂತರ್ಗತ ಪುಸ್ತಕ ಪ್ರಕಟಿಸಿ ಜನಪ್ರಿಯರಾದರು. ತದನಂತರ 1918ರಲ್ಲಿ ಮೈಸೂರ ವಿಶ್ವವಿದ್ಯಾಲಯದ ಮಹಾರಾಜಾ ಕಾಲೇಜಿನ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ, ಮೈಸೂರಿನಲ್ಲಿ ವಿದ್ಯಾರ್ಥಿಗಳ ಮೇಲೆ ಗಾಢ ಪರಿಣಾಮ ಬೀರಿದ ಡಾ॥ ರಾಧಾಕೃಷ್ಣನ್ ಪ್ರಸಕ್ತ ತತ್ವಜ್ಞಾನದಲ್ಲಿ ಧರ್ಮದ ಪ್ರಭುತ್ವ ಎಂಬ ಗ್ರಂಥವನ್ನು ರಚಿಸಿ ಜಗದ್ವಿಖ್ಯಾತರಾದರು. ರಾಧಾಕೃಷ್ಣನರವರ ಅಮೋಘ ವಿದ್ವತ್ತಿನ ಕೀರ್ತಿ ವಿಶ್ವದಾದ್ಯಂತ ಹರಡಿದಾಗ 1921ರಲ್ಲಿ ಕಲ್ಕತ್ತ ವಿಶ್ವವಿದ್ಯಾಲಯದ ಉಪಕುಲಪತಿ ಅಶುತೋಷ ಮುಖರ್ಜಿಯವರು ಆಮಂತ್ರಣದ ಮೇರೆಗೆ ಕೊಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕರಾದರು. ಡಾ.. ರಾಧಾಕೃಷ್ಣನ್ ಭಾರತ ಸಂಸ್ಕೃತಿಯ ಹರಿಕಾರರಾಗಿ ದೇಶವಿದೇಶಗಳಲ್ಲಿ ಸುತ್ತಿದರು. 1931ರಲ್ಲಿ ಆಂಧ್ರ ವಿಶ್ವವಿಧ್ಯಾಲಯದ ಉಪಕುಲಪತಿಗಳಾಗಿನೇಮಕಗೊಂಡು ಉತ್ತಮ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಿ ಹಲವಾರು ಸುಧಾರಣೆಗಳಿಗೆ ಕಾರಣರಾದರು.

ಡಾ॥ ರಾಧಾಕೃಷ್ಣನ್‌ರು ಒಬ್ಬ ಆದರ್ಶ ಶಿಕ್ಷಕರೂ ಆಗಿದ್ದರು. ಅವರಿಗೆ ಅಪಾರ ಶಿಷ್ಯವೃಂದವಿತ್ತು. ಅವರ ಹಾಗೂ ಶಿಷ್ಯರ ಸಂಬಂಧ ಹೇಗಿತ್ತು ಎಂಬುದಕ್ಕೆ ಒಂದು ಘಟನೆಯನ್ನು ಕೇಳಿ, ಅವರು ಮೈಸೂರು ವಿಶ್ವವಿದ್ಯಾಲಯದ ಉನ್ನತ ಹುದ್ದೆಗೆ ನೇಮಿಸಿರುವುದಾಗಿ ಆದೇಶವಾಯಿತು. ಬೀಳ್ಕೊಡುವ ಸಮಾರಂಭಕ್ಕೆ ಅವರ ಅಪಾರ ಶಿಷ್ಯವೃಂದ ನೆರೆದಿತ್ತು. ಅವರು ಸಮಾರಂಭ ಮುಗಿಸಿಕೊಂಡು ಹಾಗೆಯೇ ರೈಲ್ವೆ ನಿಲ್ದಾಣಕ್ಕೆ ಹೋಗುವವರಿದ್ದರು. ಅವರನ್ನು ಕರೆದೊಯ್ಯಲು ಕುದುರೆ ಗಾಡಿಯೊಂದು ಸಿದ್ದವಾಗಿತ್ತು. ಆಗ ಅವರ ಶಿಷ್ಯರು ಕುದುರೆಯನ್ನು ಬಿಚ್ಚಿ ಅದಕ್ಕೆ ತಾವೇ ಹೆಗಲು ಕೊಟ್ಟು ಗುರುವನ್ನು ನಿಲ್ದಾಣದವರೆಗೆ ಹೊತ್ತೊಯ್ದರು. ಆ ದೃಶ್ಯ ನೆರೆದವರ ಕಂಗಳಲ್ಲಿ ನೀರು ತರಿಸಿತ್ತು.

ರಾಧಾಕೃಷ್ಣನ್ ಮಹಾನ್ ಪ್ರಜಾಪ್ರಭುತ್ವವಾದಿಯಾಗಿದ್ದರು. 1931 – 36ರಲ್ಲಿ ಆಂಧ್ರ ವಿಶ್ವವಿದ್ಯಾಲಯ 1936– 48 ರ ಅವಧಿಯಲ್ಲಿ ದೆಹಲಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದರು. 1946 – 51 ರ ವರೆಗೆ ಯುನೆಸ್ಕೊದಲ್ಲಿ ಭಾರತದ ನಿಯೋಗದ ನಾಯಕರಾಗಿದ್ದರು. 1949 ರಿಂದ 1952 ರವರೆಗೆ ಸೋವಿಯಟ್ ರಶಿಯಾದಲ್ಲಿ ರಾಯಭಾರಿಯಾಗಿದ್ದರು. ಈ ಸಂದರ್ಭದಲ್ಲಿ ಅಂದಿನ ಸೋವಿಯಟ್ ನಾಯಕ ಸ್ಟಾಲಿನ್ ಮೇಲೂ ವಿಶೇಷ ಪ್ರಭಾವ ಬೀರಿದರು. 1952ರಲ್ಲಿ ಭಾರತಕ್ಕೆ ಹಿಂದಿರುಗಿದ ರಾಧಾಕೃಷ್ಣನ್ ಉಪರಾಷ್ಟ್ರಪತಿಯಾಗಿ ಆಯ್ಕೆಯಾಗಿ 1962 –11 ರಂದು ರಾಷ್ಟ್ರಪತಿಯಾಗಿ ಆಯ್ಕೆಯಾದರು. 1967ರಲ್ಲಿ ಆ ಹುದ್ದೆಯಿಂದ ನಿವೃತ್ತರಾದರು.

ಡಾ॥ ರಾಧಾಕೃಷ್ಣನ್ ಸರ್ವಧರ್ಮಗಳಲ್ಲಿ ಸಮಾನ ದೃಷ್ಟಿಕೋನ ಇಟ್ಟುಕೊಂಡವರು ಉಪನ್ಯಾಸಗಳ ಮೂಲಕ ಹಿಂದೂ ಧರ್ಮ ಪರಂಪರೆ ಕಲೆ, ಸಾಹಿತ್ಯಗಳನ್ನೆಲ್ಲ ಪ್ರಪಂಚಕ್ಕೆ ಪರಿಚಯಿಸಿದ ಕೀರ್ತಿ ಅವರದು. ಮಾನವ ಬದುಕನ್ನು ತೀರ ಹತ್ತಿರದಿಂದ ಕಂಡುಕೊಂಡ ಅವರಿಂದ ಮೂಡಿಬಂದ 'ಸತ್ಯಾನ್ವೇಷಣೆ' ಎಂಬ ಕೃತಿ ಅವರ ಮಾನವೀಯತೆಗೆ ಹಿಡಿದ ಕನ್ನಡಿಯಾಗಿದೆ ಅವರು ದೀನದರಿದ್ರನ್ನು ದುಃಖಿತರನ್ನು ಸಂತೈಸುವ ಅಪಾರ ಮನಸ್ಸು ಹೊಂದಿದ್ದರು. ಆ ಕಾರ್ಯ ಅವರಿಂದ ಸರಿಯಾಗಿ ವ್ಯಾಪಕವಾಗಿ ಆಗದ್ದಕ್ಕಾಗಿ ಅವರು ನೊಂದುಕೊಂಡಿದ್ದರು. ಶ್ರೇಷ್ಠ ಶಿಕ್ಷಕ ವಿದ್ವಾಂಸರ ಆಡಳಿತಗಾರ ಉಪನ್ಯಾಸಕರಾಗಿದ್ದ ಅವರು ತತ್ವಗಳನ್ನು ಆದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದರಲ್ಲೇ ಸಾರ್ಥಕತೆಯಿದೆ.

1975 ಎಪ್ರೀಲ್ 12 ರಂದು ಈ ಜ್ಯೋತಿ ನಂದಿದಾಗಿ ಭಾರತದ ಜನರಷ್ಟೇ ಅಲ್ಲ ಇಡೀ ಜಗತ್ತೆ ಶೋಕವನ್ನು ಆಚರಿಸಿತು. ಡಾ.. ಎಸ್ ರಾಧಾಕೃಷ್ಣನ್ನ ಅವರ ಪ್ರಮುಖ ಕೃತಿಗಳು

1) ರವೀಂದ್ರನಾಥ ಟ್ಯಾಗೋರರ ತತ್ವಜ್ಞಾನ, 2) ಸಮಕಾಲೀನ ತತ್ವಶಾಸ್ತ್ರದಲ್ಲಿ ಧರ್ಮದ ಆಳ್ವಿಕೆ, 3) ಭಾರತೀಯ ತತ್ವಶಾತತ್ವಶಾಸ್ತ್ರ, 4) ಹಿಂದೂ ಜೀವನ ದರ್ಶನ, 5) ಮತಧರ್ಮದಲ್ಲಿ ಪೂರ್ವ ಮತ್ತು ಪಶ್ಚಿಮ, 6) ಕಲ್ಕಿ ಅಥವಾ ನಾಗರೀಕತೆಯ ಭವಿಷ್ಯ, 7) ನಮಗೆ ಬೇಕಾದ ಧರ್ಮ, 8) ಗೌತಮ ಬುದ್ದ, 9) ಧರ್ಮ ಮತ್ತು ಸಮಾಜ, 10) ಶಿಕ್ಷಣ, ರಾಜಕೀಯ ಮತ್ತು ಯುದ್ದ, 11) ಭಗವದ್ಗೀತೆ, 12) ಇದು ಶಾಂತಿಯೆ?, 13) ಸೃಜನಾತ್ಮಕ ಜೀವನ, 14) ಉಪನಿಷತ್ತುಗಳು ತತ್ವ ಚಿಂತನೆ, 15) ಭಾರತ ಮತ್ತು ಚೀನಾ, 16) ಸ್ವಾತಂತ್ರ್ಯ ಮತ್ತು ಸಂಸ್ಕೃತಿ, 17) ಭಾರತದ ಮಹಾಪುರುಷರು, 18) ನನ್ನ ಸತ್ಯಾನ್ವೇಷಣೆ, 19) ಹಿಂದುಸ್ಥಾನದ ಹೃದಯ, 20) ಚಿತ್ತದಾನವಾದಿಯ ಜೀವನ ದರ್ಶನ.



Get More Learning Materials Here : CLICK HERE www.studentbro.in

**ಶಬ್ದಗಳ ಅರ್ಥ:**

ಜಗದ್ವಿಖ್ಯಾತ - ಜಗತಪ್ರಸಿದ್ಧ; ಕಂಗಳು - ಕಣ್ಣುಗಳು;

## ಅಭ್ಯಾಸ

**ಕೃತಿ 1) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**




**ಕೃತಿ 2) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ರಾಧಾಕೃಷ್ಣನ್ನರ ಜನನ ಯಾವಾಗ ಆಯಿತು?

**ಉತ್ತರ:** ........................................................................................................

........................................................................................................

2) ರಾಧಾಕೃಷ್ಣನ್ನರ ತಂದೆ-ತಾಯಿಯರ ಹೆಸರು ಹೇಳಿರಿ?

**ಉತ್ತರ:** ........................................................................................................

........................................................................................................

3) ಮದ್ರಾಸ ವಿಶ್ವವಿದ್ಯಾಲಯವು ಯಾವ ಪದವಿಯನ್ನು ನೀಡಿ ಗೌರವಿಸಿತು?

**ಉತ್ತರ:** ........................................................................................................

........................................................................................................

4) ರಾಧಾಕೃಷ್ಣನರಿಗೆ ಅಪಾರ ಶಿಷ್ಯವೃಂದವಿತ್ತು ಎಂಬುದನ್ನು ಹೇಗೆ ನಿರೂಪಿಸುವಿರಿ?

**ಉತ್ತರ:** ........................................................................................................

........................................................................................................

5) ರಾಧಾಕೃಷ್ಣನ್ನರು ರಾಷ್ಟ್ರಪತಿಯಾಗಿ ಯಾವಾಗ ಆಯ್ಕೆಯಾದರು?

**ಉತ್ತರ:** ........................................................................................................

........................................................................................................

**ಕೃತಿ 3) ಬಿಟ್ಟಸ್ಥಳ ತುಂಬಿರಿ.**

1) ಸೆಪ್ಟೆಂಬರ 5 ರಂದು ...................... ಜನ್ಮದಿನವನ್ನು ಶಿಕ್ಷಕ ದಿನವಾಗಿ ಆಚರಿಸುತ್ತಾರೆ.
2) ...................... ವಿಶ್ವವಿದ್ಯಾಲಯದಿಂದ ...................... ರಲ್ಲಿ ಎಂಬ ಪದವಿ ಪಡೆದರು.
3) ಟಾಗೋರ ಅವರ ......................ಎಂಬ ಉನ್ನತ ಮಟ್ಟದ ಜ್ಞಾನಾಂತರ್ಗತ ಪುಸ್ತಕ ಪ್ರಕಟಿಸಿ ಜನಪ್ರಿಯರಾದರು.
4) ಡಾ॥ ರಾಧಾಕೃಷ್ಣನರು ಒಟ್ಟು ಆದರ್ಶ ......................
5) ...................... ಏಪ್ರಿಲ 17 ರಂದು ಈ ಜ್ಯೋತಿ ನಂದಿತು.

IL9X1X

**ಉಪಕ್ರಮ :** ನಮ್ಮ ದೇಶದ ಬೇರೆ ಬೇರೆ ಶಿಕ್ಷಣತಜ್ಞರ ಜೀವನಚರಿತ್ರೆಗಳನ್ನು ಓದಿ ತಿಳಿದುಕೊಳ್ಳಿರಿ.



Get More Learning Materials Here : CLICK HERE www.studentbro.in

# 8. ನಿಜವಾದ ದಾನಶೀಲತೆ



ಈಶ್ವರಚಂದ್ರ ವಿದ್ಯಾಸಾಗರರು ರಸ್ತೆಯಲ್ಲಿ ಹೋಗುವಾಗ, ಸುತ್ತಲೂ ಎಲ್ಲರನ್ನೂ ಗಮನಿಸಿಕೊಂಡೇ ಹೋಗುತ್ತಿದ್ದರು. ಯಾರಿಗಾದರೂ ಸಹಾಯ ಬೇಕಾಗಿದ್ದರೆ ಮಾಡಬಹುದು ಎಂದು ಅವರ ಭಾವನೆ! ಒಂದು ದಿನ ಅವರ ದೃಷ್ಟಿಯು, ಒಬ್ಬ ವ್ಯಕ್ತಿಯ ಮೇಲೆ ಬಿತ್ತು. ಅವನು ತಲೆ ತಗ್ಗಿಸಿ, ಬಹಳ ಯೋಚನೆಯಿಂದ ಕುಂದಿದವನಂತೆ ಹೋಗುತ್ತಿದ್ದನು. ವಿದ್ಯಾ ಸಾಗರರಿಗೆ ಅವನ ಪರಿಚಯವಿರಲಿಲ್ಲ ಮತ್ತು ಅವನಿಗೆ ವಿದ್ಯಾಸಾಗರರ ಪರಿಚಯವೂ ಇರಲಿಲ್ಲ.

ಅವನ ಬಳಿಗೆ ಹೋಗಿ, ವಿದ್ಯಾಸಾಗರರು, ''ಏನು ಯೋಚನೆಯಪ್ಪಾ, ಹೀಗೆ ಹೆಜ್ಜೆ ಹಾಕುತ್ತಿದ್ದೀ? ಎಂದು ಕೇಳಿದರು.

ಅವನು ದೀರ್ಘವಾಗಿ ಉಸಿರುಬಿಟ್ಟು, ''ಮುಳುಗಿಹೋಗುತ್ತಿದ್ದೀನಿ ನಾನು'' ಎಂದ.

ವಿದ್ಯಾಸಾಗರರು ''ಹೇಳಪ್ಪಾ, ಅಂಥ ಕಷ್ಟವೇನು ಬಂತು ಅಂತ ನಾನೂ ತಿಳಿದುಕೊಳ್ತೀನಿ'' ಎಂದರು.

''ಕೇಳಿ ನೀವೇನು ಮಾಡ್ತೀರಿ? ನಿಮ್ಮ ಕೈಲಿ ನನಗೆ ಸಹಾಯ ಮಾಡುವುದಕ್ಕೆ ಸಾಧ್ಯವೇ?'' ಎಂದ.

ಅವನನ್ನು, ಅಷ್ಟಕ್ಕೆ ಬಿಡದೆ ವಿದ್ಯಾಸಾಗರರು, ''ನಾನು ತಿಳ್ಕೊಂಡು ಏನೋ ಆದ ಸಹಾಯ ಮಾಡೋಣ ಅಂದ್ರೆ ನೀನು ಹೇಳುವುದಕ್ಕೇ ಬೇಸರಿಸಿ ಕೊಳ್ಳುವೆಯಲ್ಲಾ?'' ಎಂದರು.

ಆಗ ಅವನು, ''ನಾನು ಬಡ ಬ್ರಾಹ್ಮಣ. ಮಗಳ ಮದುವೆಗೆ ಎಂದು ಯಾರ ಕೈಲೋ ಸಾಲ ಮಾಡಿದ್ದೆ. ತೀರಿಸಕ್ಕೇ ಆಗಲಿಲ್ಲ, ಈಗ ಅವನು ನನ್ನ ಮೇಲೆ ದಾವಾ ಹಾಕಿದ್ದಾನೆ. ದುಡ್ಡು ಎಲ್ಲಿಯೂ ಸಿಕ್ಕುತ್ತಿಲ್ಲ'' ಎಂದನು. ವಿದ್ಯಾಸಾಗರರು, ಅವನ ಹೆಸರು, ವಿಳಾಸ ಮತ್ತು ಯಾವ ನ್ಯಾಯಾಲಯದಲ್ಲಿ ಅವನ ಕೇಸು ನಡೆಯುತ್ತಿದೆ ಎಂದೆಲ್ಲಾ ವಿವರಗಳನ್ನು ಪಡೆದು, ಹೊರಟುಹೋದರು.

ಮೊಕದ್ದಮೆಯ ದಿನ, ಬ್ರಾಹ್ಮಣ ಕೋರ್ಟ್ ತಲುಪಿದಾಗ, ಅವನ ಸಾಲ ಯಾರೋ ತೀರಿಸಿದ್ದಾಗಿದೆ. ಮೊಕದ್ದಮೆ ಮುಗಿಯಿತು ಎಂದು ತಿಳಿಯಿತು. ''ಯಾರೋ ಪುಣ್ಯಾತ್ಮರು ಕೊಟ್ಟಿದ್ದಾರೆ'' ಎಂದು ಕೊಳ್ಳುತ್ತಿದ್ದಾಗ ವಿದ್ಯಾಸಾಗರರ ನೆನಪಾಯಿತು ನಿಜ. ಆದರೆ ಅವನಿಗೆ ವಿದ್ಯಾಸಾಗರರ ಹೆಸರೂ ಕೂಡ ತಿಳಿದಿರಲ್ಲಿಲ್ಲ, ತನ್ನ ಕೃತಜ್ಞತೆಯನ್ನು ಅರ್ಪಿಸಲು. ಭಗವಂತನಿಗೇ ಕೈ ಮುಗಿದು, ''ನನ್ನನ್ನು ಋಣಮುಕ್ತನಾಗಿಸಿದ ವ್ಯಕ್ತಿಗೆ ದೀರ್ಘಾಯಸ್ಸು ಕೊಡಪ್ಪಾ'' ಎಂದು ಪ್ರಾರ್ಥಿಸಿದ.



Get More Learning Materials Here : CLICK HERE www.studentbro.in

**ಶಬ್ದಗಳ ಅರ್ಥ**

ಯೋಚನೆ – ವಿಚಾರ; ತೀರಿಸು – ಮುಟ್ಟಿಸು; ಕೇಸು – ದಾವಾ; ಕೃತಜ್ಞತೆ – ಉಪಕಾರ

## ಅಭ್ಯಾಸ

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ವಿದ್ಯಾಸಾಗರರು ಅಪರಿಚಿತನಿಗೆ ಏನು ಕೇಳಿದರು?

2) ಅಪರಿಚಿತವ್ಯಕ್ತಿ ಯಾವ ಉತ್ತರ ಕೊಟ್ಟನು?

3) ವಿದ್ಯಾಸಾಗರರು ಯಾವ ಮಾಹಿತಿ ಸಂಗ್ರಹಿಸಿಕೊಂಡರು?

4) ಮೊಕದ್ದಮೆ ಹೇಗೆ ಮುಗಿಯಿತು?

**ಕೃತಿ 2) ಬಿಟ್ಟ ಸ್ಥಳ ತುಂಬಿರಿ.**

1) ...................... ರಸ್ತೆಯಲ್ಲಿ ಹೋಗುತ್ತಿರುವಾಗ ಸುತ್ತಲೂ ಎಲ್ಲರನ್ನೂ ಗಮನಿಸಿಕೊಂಡೇ ಹೋಗುತ್ತಿದ್ದರು.

2) ಬಹಳ ಯೋಚನೆಯಿಂದ ...................... ಹೋಗುತ್ತಿದ್ದನು.

3) ಈಗ ಅವನು ನನ್ನ ಮೇಲೆ ...................... ಹಾಕಿದ್ದಾನೆ.

4) ನನ್ನನ್ನು ...................... ವ್ಯಕ್ತಿಗೆ ದೀರ್ಘಾಯುಸ್ಸು ಕೊಡಪ್ಪ

**ಕೃತಿ 3) ಗುಂಪಿಗೆ ಸೇರದ ಶಬ್ದ ಗುರುತಿಸಿಬರೆಯಿರಿ.**

1) ಕಂಬಾರ, 2) ಕುಂಬಾರ 3) ಅಕ್ಕಸಾಲಿಗ 4) ಬ್ರಾಹ್ಮಣ

1) ನ್ಯಾಯಾಲಯ, 2) ಮೃಗಾಲಯ 3) ಕಾರ್ಯಾಲಯ 4) ವಿದ್ಯಾಲಯ

**ಕೃತಿ 4) ನ್ಯಾಯಾಲಯಕ್ಕೆ ಭೆಟ್ಟಿಕೊಟ್ಟು ಅಲ್ಲಿಯ ಕಾರ್ಯವೈಖರಿಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಉಪಕ್ರಮ :** ಭಾರತದ ಚರಿತ್ರೆಯಲ್ಲಿ ಆಗಿ ಹೋದ ಮಹಾಪುರುಷರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಟಿಪ್ಪಣಿ ಪುಸ್ತಕದಲ್ಲಿಬರೆಯಿರಿ.

ILIT3K



Get More Learning Materials Here : CLICK HERE www.studentbro.in

# 9. ಕೈತುತ್ತು ತಿನಿಸಿದ್ದೆ

- ಜನಪದರು

ಕೈತುತ್ತು ತಿನಿಸಿದ್ದೆ ಜೋಗುಳವ ಹಾಡಿದ್ದೆ
ತಂಗೀಯೆ ನಿನ್ನ ಬೆಳೆಸಿದ್ದೆ । ಹೂವಾಗಿ ।
ಗಂಡನ ಮನೆಗ್ಹೋಗಿ ಮರಿಬ್ಯಾಡ ॥

ಮರೆವುದು ಹೇಗಣ್ಣ ನನ ಕಣ್ಣು ನೀನಣ್ಣ
ಅಚಲವು ಎಂದಿಗು ಬಾನಾ ಬಣ್ಣ । ಅಣ್ಣ
ಮರೆತರ ಉಳಿವು ಇರದಣ್ಣ ॥



ಅತ್ತೆಮಾವಂದಿರು ತಂದೆತಾಯಂತೆ
ಗಂಡಾನೆ ನಿನಗೆ ಸೌಭಾಗ್ಯ । ನನ ತಂಗಿ ।
ಬೇದಾವ ಮಾಡಾದೆ ಬಾಳಮ್ಮ ॥

ನಿನ ಮಾತು ಮೀರಲಾರೆ ಬೇದಾವ ಮಾಡಲಾರೆ
ಅವರ ಎದುರಾಗಿ ನಡೆಯಲಾರೆ । ಅಣ್ಣಯ್ಯ
ಹರಸಿ ಕಳಿಸಣ್ಣ ಆ ಮನೆಗೆ ॥

ಒಡಿಬ್ಯಾಡ ಸಂಸಾರ ನಿನಗಿರಲಿ ಎಚ್ಚರ
ಸಿರಿಬಂದ್ರೆ ಮರಿಬ್ಯಾಡ ತವರೂರ । ನನ ತಂಗಿ
ಸಿರಿಯಲ್ಲಿ ನೀತಿ ಬಿಡಬ್ಯಾಡ ॥

ಸಿರಿಯು ಎನಗೇಕಣ್ಣ ಗಂಡನೆ ಮಿಗಿಲಣ್ಣ
ನಶ್ವರದ ಆ ಬಾಳು ಇರಲೇಕೆ । ಅಣ್ಣಯ್ಯ
ನಿನ್ನಂತ ಅಣ್ಣನ ಪಡೆದಾಗ ॥

ಸಲಿಗೆಯು ತರವಲ್ಲ ಅತಿಮಾತು ಒಳಿತಲ್ಲ
ಸುಳ್ಳು ಎಂದೆಂದಿಗೂ ನಿಜವಲ್ಲ । ನನ ತಂಗಿ
ಸೋಮಾರಿ ಬಾಳು ಬಾಳಲ್ಲ ॥

ನಿನ ಮಾತು ದೀಪವಾಗಿ ನನ ಬಾಳಿಗೆ ಬೆಳಕಾಗಿ
ಇರಲಿ ಎಂದೆಂದು ಸ್ಥಿರವಾಗಿ । ಅಣ್ಣಯ್ಯ
ನಿನ ರಕ್ಷೆ ಕರುಣೆ ನನಗಿರಲಿ ॥



Get More Learning Materials Here : CLICK HERE www.studentbro.in


**ಶಬ್ದಗಳ ಅರ್ಥ:**

ಅಚಲ = ಚಲಿಸದಿರುವ; ಸೌಭಾಗ್ಯ = ಮುತ್ತೈದೆತನ; ನಶ್ವರ = ನಾಶ; ಸಲಿಗೆ = ಅತಿಪರಿಚಯ; ಸೋಮಾರಿ = ಆಲಸಿತನ


ಪಠ್ಯಾಧಾರಿತ ಪದ್ಯಭಾಗವನ್ನು ಓದಿಕೊಂಡು ಕೆಳಗಿನ ಕೃತಿಗಳನ್ನು ಬಿಡಿಸಿರಿ.

## ಅಭ್ಯಾಸ

**ಕೃತಿ ೧) I. ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.**




**II. ಅಣ್ಣನ ಉಪದೇಶಗಳಿಗೆ ತಂಗಿ ನೀಡಿದ ಒಪ್ಪಿಗೆಯ ಎರಡು ಮಾತುಗಳು.**



**III. ಗಂಡನ ಮನೆಯಲ್ಲಿ ತಂಗಿಯು ಹೇಗೆ ಬಾಳಬೇಕೆಂಬುದನ್ನು ಅಣ್ಣನು ಹೇಳಿದ ಬುದ್ಧಿಮಾತುಗಳನ್ನು ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿರಿ.**

**ಕೃತಿ 2) I. ಹೆಣ್ಣಿಗೆ ಪತಿಯೇ ಶ್ರೇಷ್ಠ ಎಂಬುದನ್ನು ಪದ್ಯದ ಅಂಶಗಳಿಂದ ಸಾದರ ಪಡಿಸಿರಿ.**

..............................................................................................................

..............................................................................................................

..............................................................................................................

..............................................................................................................

..............................................................................................................

**II. ನಿಮ್ಮ ಅಣ್ಣನ ಕುರಿತು ನಿಮ್ಮ ಅಭಿಪ್ರಾಯವನ್ನು 4 ರಿಂದ 10 ವಾಕ್ಯಗಳಲ್ಲಿ ಉತ್ತರಿಸಿರಿ.**

..............................................................................................................

..............................................................................................................

..............................................................................................................

..............................................................................................................

..............................................................................................................



Get More Learning Materials Here : CLICK HERE www.studentbro.in

**ಕೃತಿ 3)** **I. ಕೆಳಗಿನ ಶಬ್ದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ಸಿರಿತನ x     ನಿಜ x     ನೀತಿ x

ಬೆಳಕು x

**II. ಕೆಳಗಿನ ಶಬ್ದದ ಕೊನೆಯ ಅಕ್ಷರವನ್ನು ಹಿಡಿದುಕೊಂಡು ಮೂರಕ್ಷರದ ಶಬ್ದಗಳನ್ನು ರಚಿಸಿರಿ.**

ನಶ್ವರ - ರಮಿಸು ......................... ......................... ......................... .........................

**III. ಕೆಳಗಿನ ಶಬ್ದಚೆಂಡಿನಿಂದ ಆಯ್ದು ಎರಡು ಅಕ್ಷರಗಳಿಂದ ಕೂಡಿದ ನಾಲ್ಕು ಅರ್ಥಪೂರ್ಣ ಶಬ್ದ ಬರೆಯಿರಿ.**

ಭ ಮ
ನೆ ಸಾ ದೂ ರ
ಬ ಗ ಣ
ಕು ಸ ನೆ

**IV. ಕೆಳಗಿನ ಸುಳಿವುಗಳಿಗೆ ಹೊಂದುವ ಸರಿಯಾದ ಅಕ್ಷರಗಳನ್ನು ಖಾಲಿ ಚೌಕೋನಗಳಲ್ಲಿ ತುಂಬಿರಿ.**

| | | | | | | |
|---|---|---|---|---|---|---|
| 1) ತಂಗಿಯನ್ನು ಹೇಗೆ ಕರೆಯುವರು | | | ದ | | | |
| 2) ಗಂಡನ ತಂದೆ | | | ವ | | | |
| 3) ತಾಯಿಯ ಮನೆ | ತ | | | | | |
| 4) ಮುತ್ತೈದೆಗೆ ಇನ್ನೊಂದು ಹೆಸರು | | ಭಾ | | | ತಿ | |

**V. ನಿಮಗೆ ಗೊತ್ತಿರುವ ಯಾವುದಾದರೂ ಎರಡು ಜಾನಪದ ತ್ರಿಪದಿಗಳನ್ನು ಬರೆಯಿರಿ.**

**ಉಪಕ್ರಮ :** 'ತಾಯಿಯ ಪ್ರೀತಿ-ಮಮತೆಯನ್ನು ಎಷ್ಟು ಬಣ್ಣಿಸಿದರೂ ಸಾಲದು'- ಎಂಬ ಮಾತನ್ನು ವಿಸ್ತರಿಸಿ ಬರೆಯಿರಿ.

ILSP58



Get More Learning Materials Here : CLICK HERE www.studentbro.in

# 10. ಏಕತೆಯಲ್ಲಿ ವಿವಿಧತೆ

- ಏ. ಮುನಿವೆಂಕಟಪ್ಪ

ವಿವಿಧತೆಯಲಿ ಏಕತೆ
ನಮ್ಮ ತಾಯಿ ಭಾರತಿ
ಏಕತೆಯಲಿ ವಿವಿಧತೆ
ನೋಡು ನಮ್ಮ ಸಂಸ್ಕೃತಿ । ಪ ।

ಬೇಕು ಒಲವಿನ ಬೆಳಗು
ಬೇಡ ದ್ವೇಷ ಕಿಚ್ಚು
ಇರಲಿ ಸರ್ವರಿಗೆ ಸಮ ಪಾಲು
ಬರಲಿ ಸರ್ವರಿಗೆ ಸಮ ಬಾಳು ।

ವಿವಿಧ ಧರ್ಮ ವಿವಿಧ ಭಾಷೆ
ದೇಶ ಒಂದೇ ಭಾರತ
ವಿವಿಧ ಮತ ವಿವಿಧ ವೇಷ
ಭೂಮಿ ಒಂದೇ ಭಾರತ

ಬೆಳಗಬೇಕು ಪ್ರತಿಮನೆ
ಮನಮೊಳಗೆ ಶಾಂತಿ ದೀಪ
ಅರಳ ಬೇಕು ಪ್ರತಿಮನೆ
ಮನೆಯೊಳಗೆ ಶಾಂತಿ ಪುಷ್ಪ ।



**ಶಬ್ದಗಳ ಅರ್ಥ:**

ಏಕತೆ - ಐಕ್ಯತೆ, ಒಕ್ಕಟು; ವಿವಿಧತೆ - ತರ-ತರ, ಭಿನ್ನವಾದ, ಬೇರೆ-ಬೇರೆ; ಒಲವು - ಸಂತೋಷ; ಮತ - ಅಭಿಪ್ರಾಯ

## ಅಭ್ಯಾಸ

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ತಾಯಿ ಭಾರತೀಯ ಏಕತೆ ಯಾವುದರಲ್ಲಿ ಇದೆ?

ಉತ್ತರ: ..........................................................................................................................
..........................................................................................................................



Get More Learning Materials Here : CLICK HERE www.studentbro.in

2) ನಮ್ಮ ಬಾಳು ಹೇಗಿರಬೇಕು ಎಂದು ಕವಿ ಹೇಳಿದ್ದಾನೆ ?

ಉತ್ತರ: ................................................................................................................................


................................................................................................................................

3) ಪ್ರತಿಯೊಂದು ಮನೆ ಹೇಗಿರಬೇಕು?

ಉತ್ತರ: ................................................................................................................................

................................................................................................................................

**ಕೃತಿ 2) ಕೆಳಗಿನ ಜಾಲಾಕೃತಿ ಪೂರ್ಣಗೊಳಿಸಿರಿ.**




**ಕೃತಿ 3) ವರ್ಗದಲ್ಲಿ ಗೆಳೆಯರೊಂದಿಗೆ/ಶಿಕ್ಷಕರೊಂದಿಗೆ ಚರ್ಚಿಸಿ, ಕೆಳಗಿನ ವಿಧಾನಗಳು ಸರಿ-ತಪ್ಪು ಎಂಬುದನ್ನು ಬರೆಯಿರಿ.**


1) ಭಾರತದಲ್ಲಿ ಜನರು ಒಂದೇ ಭಾಷೆಯಲ್ಲಿ ಮಾತಾಡುವರು.

2) ಭಾರತದಲ್ಲಿಯ ಜನಾಂಗದ ವೇಷ ಭೂಷ ಭಿನ್ನವಾಗಿದೆ.

3) ಯಾವುದೇ ದೇಶದ ಪ್ರಗತಿಗೆ ಏಕತೆ, ಶಾಂತತೆ ಅವಶ್ಯಕವಿದೆ.

4) ಭಾರತದ ಎಲ್ಲ ಧರ್ಮದ, ಭಾಷೆಯ ಜನರು ಸರಿ ಸಮಾನರು.

**ಕೃತಿ 4) ಕೆಳಗಿನ ಜಾಲಾಕೃತಿ ಪೂರ್ಣಗೊಳಿಸಿರಿ.**




**ಉಪಕ್ರಮ :** ಭಾರತದ ವಿವಿಧ ಹಬ್ಬಗಳ/ಉತ್ಸವಗಳ ಮಾಹಿತಿ ಸಂಗ್ರಹಿಸಿ ಟಿಪ್ಪಣೆ ಪುಸ್ತಕದಲ್ಲಿ ಬರೆಯಿರಿ.



Get More Learning Materials Here : CLICK HERE www.studentbro.in

# 11. ಹಸಿರು ಹೊನ್ನು


– ಎಂ.ಡಿ. ಗೋಗೇರಿ

ಜೀವ ಭಾವ ಸೂರೆಗೊಳುವ
ಸುಂದರ ತರುಲತೆಗಳು
ಭೂಮಾತೆಯ ಒಡಲಾಳದ
ಕರುಣೆಯ ನವ ಶಿಸುಗಳು
ಕಾಪಾಡು ಕಾಡು
ಬಾಳು ಜೇನು ಗೂಡು

ಚಿಗುರು ತೊಟ್ಟು ಹೂವ ಬಿಟ್ಟು
ಹಸಿರನುಟ್ಟ ಬನಗಳು
ಬಯಸಿದಾಗ ಫಲವನೀವ
ದೇವನಿತ್ತ ವರಗಳು
ಜೋಪಾನ ಮಾಡು
ಜೀವನಕೆ ಜೋಡು

ಉರಿವ ಬೇಗೆ ಸುರಿವ ಸೆಕೆಯ
ಶಮನಗೊಳಿಸುತಿರುವವು
ನೆರಳು ನೀಡಿ ತಂಪು ಮಾಡಿ
ಮನಕೆ ಮುದವ ತರುವವು
ರಕ್ಷಿಸು ತರುಲತೆಗಳ
ಜನರ ಜೀವ ತಂತುಗಳ

ಸಸ್ಯ ಸಮೂಹ ಲಾಸ್ಯವಾಡಿ
ಸಮ್ಮೋಹನ ಗೊಳಿಸಲಿ
ಬಾನು ಬಯಲೆ ಸುರಿವ ಮಳೆಗೆ
ಹಸಿರು ಸೂಸಿ ನಲಿಯಲಿ
ಪೋಷಿಸು ಗಿಡ ಮರಗಳ
ದೇವನಿತ್ತ ವರಗಳ





Get More Learning Materials Here : CLICK HERE www.studentbro.in

**ಶಬ್ದಗಳ ಅರ್ಥ:**

ಸೂರೆಗೊಳು - ಮನಸನ್ನು ಗೆಲ್ಲು; ಒಡಲಾಳ - ಮನದಾಳ; ಬನ-ವನ; ಬೇಗೆ-ಬೆಂಕಿ, ಉರಿ

## ಅಭ್ಯಾಸ

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ತರುಲತೆಗಳು ಹೇಗಿರುತ್ತವೆ?

**ಉತ್ತರ:** ............................................................................................................

............................................................................................................

2) ಬನಗಳು ಹೇಗಿವೆ?

**ಉತ್ತರ:** ............................................................................................................

............................................................................................................

3) ದೇವರು ಕೊಟ್ಟ ವರ ಯಾವುದು?

**ಉತ್ತರ:** ............................................................................................................

............................................................................................................

4) ತರುಲತೆಗಳು ಮನಕ್ಕೆ ಯಾವ ರೀತಿ ಮುದವ ನೀಡುತ್ತವೆ?

**ಉತ್ತರ:** ............................................................................................................

............................................................................................................

5) ಬಾನಬಯಲು ಯಾವ ರೀತಿ ನಲಿಯಬೇಕು?

**ಉತ್ತರ:** ............................................................................................................

............................................................................................................

**ಕೃತಿ 2) ಕವಿತೆಯ ಬಿಟ್ಟ ಸಾಲುಗಳನ್ನು ಪೂರ್ಣಮಾಡಿರಿ.**

ಸಸ್ಯ ಸಮೂಹ ....................

..........................................

..........................................

..........................................

...................... ದೇವನಿತ್ತ ಮರಗಳು

**ಕೃತಿ 3) ಸಮಾನಾರ್ಥಕ ಶಬ್ದಗಳನ್ನು ಬರೆಯಿರಿ.**


ಕಾಡು ................................................................

ಹೂವು ................................................................

ಸಮೂಹ ................................................................

IHBG8I

**ಕೃತಿ 4) ಜಾಲಾಕೃತಿಯನ್ನು ಬಿಡಿಸಿರಿ.**





**ಉಪಕ್ರಮ :** ಗಿಡ-ಮರಗಳನ್ನು ಸಂರಕ್ಷಿಸಿ ಬೆಳೆಸುವ ಬಗೆಯನ್ನು ಶಿಕ್ಷಕರು/ಪಾಲಕರಿಂದ ಇನ್ನಷ್ಟು ಮಾಹಿತಿಯನ್ನು ಪಡೆದುಕೊಳ್ಳಿರಿ.



Get More Learning Materials Here : CLICK HERE www.studentbro.in

# 12. ಸರ್ವಜ್ಞನ ವಚನಗಳು

- ಸರ್ವಜ್ಞ



ವಿದ್ಯೆಯೇ ತಾಯ್ತಂದೆ ಬುದ್ಧಿಯೇ ಸೋದರನು ।
ಅಧ್ವಾನಕಾದರವ ನೆಂಟ ಸುಖದಿ ತಾ ।
ನಿದ್ದುದೇ ರಾಜ್ಯ ಸರ್ವಜ್ಞ ॥1॥

ವಿದ್ಯೆಯುಳ್ಳನ ಮುಖವು ಮುದ್ದು ಬರುವಂತಿಕ್ಕು ।
ವಿದ್ಯೆಯಿಲ್ಲದನ ಬರಿ ಮುಖವು ಹಾಳೂರ ।
ಹದ್ದಿ ನಂತಕ್ಕು ಸರ್ವಜ್ಞ ॥2॥

ವಿದ್ಯೆ ಕಲಿಸದ ತಂದೆ ಬುದ್ಧಿ ಕೊಡದಾ ಗುರುವು ।
ಬಿದ್ದಿ ರಲು ಬಂದು ನೋಡದಾ ತಾಯಿಯು ।
ಶುದ್ಧ ವೈರಿಗಳು ಸರ್ವಜ್ಞ ॥3॥

ಓದಿದಾ ಓದು ತಾ ಮೇದ ಕಬ್ಬಿನ ಸಿಪ್ಪೆ ।
ಓದಿನ ಒಡಲಿನರಿದಿಹರೆ ಸಿಪ್ಪೆ ಕ ।
ಬ್ಬಾದಂತೆ ಕಾಣೊ ಸರ್ವಜ್ಞ ॥4॥

ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ ।
ಅಲ್ಲದಹುದೆಂಬ ಅಜ್ಞಾನಿಯೊಡನಾಟ ।
ಕಲ್ಲು ಹಾದಂತೆ ಸರ್ವಜ್ಞ ॥5॥

ಇದ್ದಲ್ಲಿ ಸಲುವ ಹೋಗಿದ್ದಲ್ಲಿಯೂ ಸಲುವ ।
ವಿದ್ಯೆಯ ಬಲ್ಲ ಒಡವನು ಗಿರಿಯ ಮೇ ।
ಲಿದ್ದರೂ ಸಲುವ ಸರ್ವಜ್ಞ ॥6॥



Get More Learning Materials Here : CLICK HERE www.studentbro.in

**ಶಬ್ದಗಳ ಅರ್ಥ:**

ಸಿಪ್ಪೆ - ಹಣ್ಣು, ಕಾಯಿ ಮೊದಲಾದವುಗಳ ಮೇಲಿನ ಪದರು; ಗಿರಿ-ಪರ್ವತ

## ಅಭ್ಯಾಸ

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ಸೋದರರು ಯಾರು?

ಉತ್ತರ: ..........................................................................................................

..........................................................................................................

2) ವಿದ್ಯೆಯುಳ್ಳವನ ಮುಖವು ಹೇಗಿರುತ್ತದೆ?

ಉತ್ತರ: ..........................................................................................................

..........................................................................................................

3) ಯಾರುಯಾರನ್ನು ವೈರಿಗಳೆಂದು ಹೇಳುತ್ತಾರೆ?

ಉತ್ತರ: ..........................................................................................................

..........................................................................................................

4) ಯಾರ ಒಡನಾಟ ಕಲ್ಲು ಹಾರದಂತಾಗುತ್ತದೆ?

ಉತ್ತರ: ..........................................................................................................

..........................................................................................................

5) ಓದಿದಾಓದು ಹೇಗಾಗುತ್ತದೆ?

ಉತ್ತರ: ..........................................................................................................

..........................................................................................................

**ಕೃತಿ 2) ಕವಿತೆಯ ಬಿಟ್ಟುಹೋದ ಸಾಲುಗಳನ್ನು ಪೂರ್ಣಮಾಡಿರಿ.**

ಇದ್ದಲ್ಲಿ ಸಲುವ ....................

........................................

........................................

.......................... ಸರ್ವಜ್ಞ

**ಕೃತಿ 3) ಕೆಳಗಿನ ಗಾದೆಮಾತುಗಳನ್ನು ಪೂರ್ಣ ಮಾಡಿರಿ.**

1) ಕೊಟ್ಟದ್ದು ತನಗೆ ..........................................................................

2) ಕೋಟಿವಿದ್ಯೆಗಳಲ್ಲಿ..........................................................................

3) ವಿದ್ಯೆಯುಳ್ಳವನ ಮುಖವು .............................................................

IMKCA6

**ಕೃತಿ 4) ನಿಮ್ಮ ಆತ್ಮೀಯ ಗೆಳೆಯನ ಕುರಿತು ಸ್ವ ಅಭಿಪ್ರಾಯವನ್ನು ಬರೆಯಿರಿ.**

........................................

........................................

........................................

........................................

**ಉಪಕ್ರಮ :** 'ವಿದ್ಯೆ ವಿನಯವಂತನಿಗೆ ಭೂಷಣ' ಎಂಬ ಮಾತಿನ ಅರ್ಥವನ್ನೂ ಕುರಿತು ಶಿಕ್ಷಕರು/ಪಾಲಕರಿಂದ ಹೆಚ್ಚಿನ ಮಾಹಿತಿಯನ್ನೂ ಪಡೆಯಿರಿ.



Get More Learning Materials Here : CLICK HERE www.studentbro.in

# 13. ಪರಿಸರ ರಕ್ಷಿಸು

- ಅರುಣಕುಮಾರ ರಾಜಮಾನೆ

ಯಾರ ತಪ್ಪಿಗೆ ಯಾರು ಹೊಣೆ
ಯಾರ ಪಾಪಿಗೆ ಯಾರು ಹೊಣೆ ||

ಮರವ ಕಡಿಯಬೇಡ
ಪರಿಸರ ಹಾಳು ಮಾಡಬೇಡ ||

ಜುಳು-ಜುಳು ಹರಿಯುವ ನೀರು
ಪ್ರಕೃತಿ ಮಾತೆಯದು ||
ಬೀಸುವ ಗಾಳಿ ಬೆಳೆವ ಮರ
ಪ್ರಕೃತಿ ಮಾತೆಯದು ||

ಅದನು ಹಾಳು ಮಾಡಲು
ನಿನಗೇನಿದೆ ಹಕ್ಕು... ||

ಪ್ರಾಣಿ ಪಕ್ಷಿಗಳು ಬದುಕುತ್ತಿವೆ
ಪ್ರಕೃತಿ ಮಾತೆಯ ಮಡಿಲಲ್ಲಿ ||

ನೀನು ಬದುಕುತ್ತಿರುವುದು ಎಲ್ಲಿ
ಅರಿತುಕೋ ಎಲೆ ಮನುಜ ||

ಪ್ರಕೃತಿ ಮಾತೆಗೆ ಹಿಂಸೆ ನೀಡುತ್ತಿರುವಿ
ಪ್ರಾಣಿ-ಪಕ್ಷಿಗಿಂತ ನೀ ಕಡೆ ನರ ಮಾನವ ||

ಇದನು ಸಹಿಸಲು ಎಂದೆಂದು
ನೆಲ-ಜಲ ನೀಡಿದ ಭೂತಾಯಿ ||

ಇನ್ನಾದರು ಅರಿತು ಗಿಡ-ಮರ ಬೆಳೆಸು
ಬದುಕು ಸುಂದರ ಮಾಡಿಕೋ ||





Get More Learning Materials Here : CLICK HERE www.studentbro.in

**ಶಬ್ದಗಳ ಅರ್ಥ:**

ಹೊಣೆ - ಜವಾಬ್ದಾರಿ; ಮಾತೆ - ತಾಯಿ; ಅರಿ-ತಿಳಿ; ಬದುಕು - ಬಾಳು

## ಅಭ್ಯಾಸ

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ನೀರು ಹೇಗೆ ಹರಿಯುವುದು?

ಉತ್ತರ: ..........

2) ಪ್ರಾಣಿ ಪಕ್ಷಿಗಳು ಎಲ್ಲಿ ಬದುಕುತ್ತಿವೆ?

ಉತ್ತರ: ..........

3) ಕವಿಯು ಬದುಕು ಸುಂದರ ಮಾಡಿಕೊಳ್ಳಲು ಏನು ಮಾಡಲು ಹೇಳುತ್ತಾನೆ?

ಉತ್ತರ: ..........

**ಕೃತಿ 2) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

1) ..........

ಉತ್ತರ: ..........

2) ..........

ಉತ್ತರ: ..........

**ಕೃತಿ 3) ಮರಗಳಿಂದ ಆಗುವ ಲಾಭಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

..........


**ಕೃತಿ 4) ಕೆಳಗೆ ಕೊಟ್ಟ ಚೌಕಟ್ಟುಗಳಲ್ಲಿ ಸರಿಯಾಗಿ ಹೊಂದುವ ಮರಗಳ ಹೆಸರು ಬರೆಯಿರಿ.**

| | | | | |
|---|---|---|---|---|
| ಮಾ | | | ಮ | ರ |
| | | ನ | | |
| | ಲಿ | | ಮ | |
| ತೆಂ | | | | ರ |
| ಆ | | ಕ | | ಕ್ಷ |




Get More Learning Materials Here : CLICK HERE www.studentbro.in

ಕೃತಿ 5) ಕೆಳಗಿನ ಜಾಲಾಕೃತಿ ಪೂರ್ಣಗೊಳಿಸಿರಿ.




ಕೃತಿ 6) ವರ್ಗದಲ್ಲಿ ಮಿತ್ರರೊಂದಿಗೆ/ಗುರುಗಳೊಂದಿಗೆ ಚರ್ಚಿಸಿ, ಕೆಳಗಿನ ಜಾಲಾಕೃತಿ ಪೂರ್ಣಗೊಳಿಸಿರಿ.




**ಉಪಕ್ರಮ :** ನಿಮಗೆ ಸಮೀಪವಿರುವ ಹೂದೋಟಕ್ಕೆ ಭೇಟಿ ನೀಡು ಅಲ್ಲಿಯ ಮಾಹಿತಿ ಕುರಿತು ಒಂದು ಕಿರು ವರದಿ ಟಿಪ್ಪಣಿ ಪುಸ್ತಕದಲ್ಲಿ ಬರೆಯಿರಿ.

IHU8BT



Get More Learning Materials Here : CLICK HERE www.studentbro.in

# 14. ಇಂದು ಬಾಲರು ಮುಂದೆ ಯೋಧರು

– ರಂಗನಾಥ ಅಕ್ಕಲಕೋಟ

ಇಂದು ಬಾಲರು ಮುಂದೆ ಯೋಧರು
ನಾಡಕಟ್ಟುವ ನೆಂಟರು ।
ಬಯಸಿ ಬಾಳುವ ಭಾವ ತುಂಬುವ
ಭವ್ಯ ಭಾರತ ಭಂಟರು

ನಾಡ ಸೇವೆಗೆ ನಾಂದಿ ಹಾಡುತ
ನಾಡದೇವಿಯ ನಮಿಪೆವು ।
ನಾಡನುಳಿಸುವ ನಾವು ಯೋಧರು
ಧರ್ಮದೀಕ್ಷೆಯ ಪಡೆವೆವು

ಪ್ರೀತಿ ಪ್ರೇಮದ ರೀತಿ ತಿಳಿಯುತ
ನೀತಿ ಮಾರ್ಗದಿ ನಡೆವೆವು ।
ನ್ಯಾಯ ನೀತಿಗೆ ನೇಮದಿಂದಲಿ
ಜ್ಞಾನದಾರುತಿ ಹಿಡಿವೆವು



ಸತ್ಯಮಾರ್ಗದಿ ನಿತ್ಯ ದುಡಿಯುತ
ಸತ್ಯ ಪಥವನು ಹಿಡಿವೆವು ।
ಗಾಂಧಿ ತಾತನ ದಿವ್ಯ ಚೇತನ
ವಿಶ್ವ ಮುಕುಟದಿ ಮೆರೆವೆವು

ನಾವು ನಿಪುಣರು ನೀತಿವಂತರು
ಸಿಂಹ ಗರ್ಭದ ಮರಿಗಳು ।
ನೆಲದ ಋಣವನು ಪಣಕೆ ಇಡುತಿಹ
ಕಣದಿ ಕಾದುವ ಕಲಿಗಳು

ದುಷ್ಟ ಶಕ್ತಿಯ ನಾಶ ಮಾಡುತ
ಶಿಷ್ಟ ರಕ್ಷಣೆ ಮಾಳ್ಪೆವು ।
ಭ್ರಷ್ಟ ಧಣಿಗಳ ಹುಟ್ಟು ಅಡಗಿಸಿ
ಶ್ರೇಷ್ಠ ರಾಷ್ಟ್ರದಿ ಮೆರೆವೆವು.





Get More Learning Materials Here : CLICK HERE www.studentbro.in

**ಶಬ್ದಗಳ ಅರ್ಥ:**

ಯೋಧ - ಸೈನಿಕ; ನೆಂಟ - ಸಂಬಂಧಿಕ; ನಾಂದಿ - ಆರಂಭ; ಮುಕುಟ - ಕಿರೀಟ; ಶಿಷ್ಟ - ಒಳ್ಳೆಯ

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ಇಂದಿನ ಬಾಲರು ಮುಂದೆ ಏನಾಗ ಬೇಕೆಂದು ಬಯಸಿದ್ದಾರೆ?

**ಉತ್ತರ:** ..............................................................................................................

..............................................................................................................

2) ಯಾವ ಮಾರ್ಗದಲ್ಲಿ ನಡೆಯಬಯಸಿದ್ದಾರೆ?

**ಉತ್ತರ:** ..............................................................................................................

..............................................................................................................

3) ಗಾಂಧಿತಾತನ ಯಾವ ಗುಣವನ್ನು ತಮ್ಮಲಿ ಬೆಳೆಸಿಕೊಳ್ಳಲು ಅಪೇಕ್ಷಿಸಿದ್ದಾರೆ.

**ಉತ್ತರ:** ..............................................................................................................

..............................................................................................................

4) ಬಾಲಕರು ಯಾವ ರೀತಿ ಮೆರೆಯಲು ಇಚ್ಚಿಸಿದ್ದಾರೆ?

**ಉತ್ತರ:** ..............................................................................................................

..............................................................................................................

**ಕೃತಿ 2) ಕವಿತೆಯ ಬಿಟ್ಟ ಸಾಲುಗಳನ್ನು ಪೂರ್ಣಮಾಡಿರಿ.**

ನಾವು ನಿಪುಣರು ....................

..........................................

..........................................

.......................... ಕಲಿಗಳು

**ಕೃತಿ 3) ಸಮಾನಾರ್ಥಕ ಶಬ್ದಗಳನ್ನು ಬರೆಯಿರಿ.**

1) ಬಾಲರು ............................................................

2) ಭಂಟರು ............................................................

IN44DG

**ಕೃತಿ 4) ಸೈನಿಕರ ಕುರಿತು ನಿಮ್ಮ ಅಭಿಪ್ರಾಯ ಬರೆಯಿರಿ.**

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

**ಉಪಕ್ರಮ :** 'ಇಂದಿನ ಬಾಲಕರೇ ಭಾವೀ ದೇಶದ ಸತ್ಪ್ರಜೆಗಳು' ಎಂಬ ವಾಕ್ಯದ ಬಗ್ಗೆ ಮಾಹಿತಿ ಸಂಗ್ರಹಿಸಿ ಟಿಪ್ಪಣಿ ಪುಸ್ತಕದಲ್ಲಿ ಬರೆದಿಡಿರಿ.



Get More Learning Materials Here : CLICK HERE www.studentbro.in

# 15. ನಮ್ಮ ಹೊಲ

- ಎ.ಕೆ. ರಾಮೇಶ್ವರ

ಹಚ್ಚ ಹಸಿರು ನಮ್ಮ ಹೊಲ
ಹೊಡೆಯ ತೆಗೆದು ನಿಂತಿದೆ
ಬಿಂಕಿನಿಂದ ಸುಂಕ ಸುತ್ತಿ
ಕಾಳು ಹಾಲು ತುಂಬಿದೆ

ತೆನೆಯ ಮೇಲೆ ಹಕ್ಕಿ ಕುಳಿತು
ಕಾಳು ಕುಕ್ಕಿ ತಿನುವದು
ಕವಣೆಯಿಂದ ಕಲ್ಲು ಎಸೆದು
ಅಕ್ಕ ಹಕ್ಕಿ ಹೊಡೆವಳು

ಮೊಸರು ರೊಟ್ಟಿ ಬುತ್ತಿಯನ್ನು
ಅಕ್ಕ ಉಣಲು ತರುವಳು
ಹಕ್ಕಿ ಹೊಡೆದು ದಣಿದು ತಾನು
ಕುಳಿತು ಹಾಡುತಿರುವಳು

ಅಪ್ಪ ಬರಲು ಬೆಳಸಿ ತಿಂದು
ಮನೆಯ ಹಾದಿ ಹಿಡಿವಳು
ನಮ್ಮ ಹೊಲದ ಬೆಳೆಯ ಸೊಬಗು
ಕಂಡು ಮನದಿ ನಲಿವಳು

**ಶಬ್ದಗಳ ಅರ್ಥ:**

ಸುಂಕ - ಧಾನ್ಯದ ಹೊಟ್ಟು; ಕವಣೆ = ಕಲ್ಲನ್ನಿಟ್ಟು ಬೀಸಿಹೊಡೆಯುವ ಹಗ್ಗದ ಉಪಕರಣ (ಕವೆಗೋಲು); ಬೆಳಸಿ = ರಸತುಂಬಿದ ಕಾಳು (ಹಾಲುಗಾಳು)

ಪಠ್ಯಾಧಾರಿತ ಪದ್ಯವನ್ನು ಓದಿಕೊಂಡು ಕೆಳಗಿನ ಕೃತಿಗಳನ್ನು ಸೂಚನೆಗೆ ಅನುಗುಣವಾಗಿ ಬಿಡಿಸಿರಿ.

## ಅಭ್ಯಾಸ

**ಕೃತಿ 1) I. ಕೆಳಗಿನ ಜಾಲಾಕೃತಿ ತುಂಬಿರಿ.**

ಬುತ್ತಿಯಲಿ ಬಂದಿರುವ ಆಹಾರ ಪದಾರ್ಥಗಳು

| | |
|---|---|
| | |

**II. ಪದ್ಯದ ಆಧಾರದಿಂದ ಹೊಲದ ವರ್ಣನೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

.......................................................................................................................

.......................................................................................................................

.......................................................................................................................

.......................................................................................................................

**III. ನಿಮಗೆ ಹೊಲದಲ್ಲಿ ಆದ ಅನುಭವಗಳನ್ನು ಐದಾರು ವಾಕ್ಯಗಳಲ್ಲಿ ಸಾದರ ಪಡಿಸಿರಿ.**

.......................................................................................................................

.......................................................................................................................

.......................................................................................................................

.......................................................................................................................



Get More Learning Materials Here : CLICK HERE www.studentbro.in

**ಕೃತಿ 2) I. ಕೆಳಗಿನ ವಾಕ್ಯಗಳಲ್ಲಿ ಸರಿ ತಪ್ಪು ಗುರುತಿಸಿ ಹೇಳಿರಿ.**

1) ಹೊಲವು ಅಚ್ಚು ಕೆಂಪಾಗಿ ಕಾಣಿಸುತ್ತಿತ್ತು

ಉತ್ತರ: ..........................................................................................................

2) ಹಕ್ಕಿ ಹೊಡೆಯಲು ಕವಣೆ ಉಪಯೋಗಿಸುವರು

ಉತ್ತರ: ..........................................................................................................

3) ಅಣ್ಣನು ಬುತ್ತಿಯನ್ನು ತಂದನು

ಉತ್ತರ: ..........................................................................................................

4) ಅಕ್ಕನು ಶಾಲೆಯ ಹಾದಿ ಹಿಡಿದಳು

ಉತ್ತರ: ..........................................................................................................

**II. ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ.**

| | |
|---|---|
| 1) ಜೋಳ, ತೊಗರಿ, ಹೆಸರು, ಕಡಲೆ | |
| 2) ಹೊಲ, ಗದ್ದೆ, ತೋಟ, ಉದ್ಯಾನ | |
| 3) ಸನಿಕೆ, ಗುದ್ದಲಿ, ಬಂದೂಕ, ಕೊಡಲಿ | |
| 4) ಕೆರೆ, ಶಾಲೆ, ಹಳ್ಳ, ಬಾವಿ | |

**ಕೃತಿ 3) I. ಕೆಳಗಿನ ಶಬ್ದಗಳ ಸಮಾನಾರ್ಥಕ ಶಬ್ದಗಳನ್ನು ಬರೆಯಿರಿ.**

ರೈತ ................................ ................................

ಅಕ್ಕ ................................ ................................

ಮನೆ ................................ ................................

ನಲಿ ................................ ................................

**II. ನಿಮ್ಮ ಶಾಲೆಯಲ್ಲಿ ಕೈಕೊಂಡ ವನಭೋಜನದ ಕುರಿತು ನಿಮ್ಮ ಅಕ್ಕನಿಗೆ ಒಂದು ಪತ್ರ ಬರೆಯಿರಿ.**

..........................................................................................................

..........................................................................................................

..........................................................................................................

..........................................................................................................

..........................................................................................................

**ಉಪಕ್ರಮ :** ಅಕ್ಕ-ತಮ್ಮನ ಬಾಂಧವ್ಯವನ್ನು ಕುರಿತು ಹತ್ತು ಸಾಲುಗಳನ್ನು ಬರೆಯಿರಿ.

INCZF4




Get More Learning Materials Here : CLICK HERE www.studentbro.in

# ಸಂಧಿಗಳು

ಎರಡು ಅಕ್ಷರಗಳು ಕಾಲವಿಳಂಬವಿಲ್ಲದೆ. ಅರ್ಥಕೆಡದಂತೆ ಪರಸ್ಪರ ಕೂಡಿಕೊಳ್ಳುವುದಕ್ಕೆ ಸಂಧಿ ಎನ್ನುವರು. ಸಂಧಿಗಳನ್ನು ಕನ್ನಡ ಸಂಧಿ ಮತ್ತು ಸಂಸ್ಕೃತ ಸಂಧಿ ಎಂದು ಎರಡು ಪ್ರಕಾರಗಳಲ್ಲಿ ವಿಂಗಡಿಸುವರು.

**ಕನ್ನಡ ಸಂಧಿಗಳು :-**




**ಸ್ವರಸಂಧಿಗಳು :-**

ಸ್ವರದ ಮುಂದೆ ಸ್ವರ ಬಂದಾಗ ಸ್ವರ ಸಂಧಿಯಾಗುವವು. ಇದರಲ್ಲಿ ಲೋಪ ಮತ್ತು ಆಗಮ ಸಂಧಿಗಳೆಂಬ ಎರಡು ವಿಧ.

**(1) ಲೋಪ ಸಂಧಿ:**

ಸ್ವರದ ಮುಂದೆ ಸ್ವರ ಬಂದಾಗ ಪೂರ್ವಪದದ ಕೊನೆಯ ಸ್ವರ ಲೋಪವಾಗುವುದು. ಇದಕ್ಕೆ ಸ್ವರಲೋಪ ಸಂಧಿ ಎನ್ನುವರು.

ಉದಾ:- ಪೂರ್ವಪದ + ಉತ್ತರ ಪದ = ಸಂಧಿ

ಮರ + ಅನ್ನು = ಮರವನ್ನು

ಇಲ್ಲ + ಒಂದು = ಇಲ್ಲೊಂದು

**(2) ಆಗಮ ಸಂಧಿ:**

ಸ್ವರದ ಮುಂದೆ ಸ್ವರ ಬಂದು ಸಂಧಿಯಾಗುವಾಗ ಅರ್ಥ ಕೆಡುವಂತದ್ದರೆ ಪದ ಮಧ್ಯದಲ್ಲಿಯ ವ ಕಾರವನ್ನು ಹೊಸದಾಗಿ ಸೇರಿಸಿಕೊಳ್ಳುವದು. ಯಕಾರವನ್ನು ಸೇರಿಸಿದರೆ ಯಕಾರಾಗಮ ಸಂಧಿ. ವಕಾರವನ್ನು ಸೇರಿಸಿದರೆ ವಕಾರಾಗಮ ಸಂಧಿ ಎಂದು ಕರೆಯುವರು.

ಉದಾ:- ಗಿಡ + ಅನ್ನು = ಗಿಡವನ್ನು

ಶಾಲೆ + ಅನ್ನು = ಶಾಲೆಯನ್ನು

**ಯಕಾರಾಗಮ ಸಂಧಿ :** ಆ, ಇ, ಈ, ಎ, ಏ, ಐ, ಓ ಸ್ವರಗಳ ಮುಂದೆ ಸ್ವರ ಬಂದಾಗ ಯಕಾರಾಗಮವಾಗುವುದು.

ಉದಾ :- ಸರಿ + ಆಗಿ = ಸರಿಯಾಗಿ

ಮನೆ + ಅನ್ನು = ಮನೆಯನ್ನು



Get More Learning Materials Here : CLICK HERE www.studentbro.in

**ವಕಾರಾಗಮ ಸಂಧಿ :** ಉ, ಊ, ಋ, ಓ, ಔ ಸ್ವರಗಳ ಮುಂದೆ ಸ್ವರ ಬಂದರೆ ವಕಾರಾಗಮವಾಗುವುದು.

ಉದಾ:- ಕಾಲ + ಅನ್ನು = ಕಾಲವನ್ನು

ಆನಂದ + ಅನ್ನು = ಆನಂದವನ್ನು

**ವ್ಯಂಜನ ಸಂಧಿಗಳು :-**

**ಆದೇಶ ಸಂಧಿ :-** ವ್ಯಂಜನದ ಮುಂದೆ ವ್ಯಂಜನ. ವ್ಯಂಜನದ ಮುಂದೆ ಸ್ವರ ಇಲ್ಲವೆ ಸ್ವರದ ಮುಂದೆ ವ್ಯಂಜನ ಬಂದರೆ ವ್ಯಂಜನ ಸಂಧಿಯಾಗುವುದು. ವ್ಯಂಜನ ಸಂಧಿಗಳಲ್ಲಿ ಒಂದು ವ್ಯಂಜನದ ಸ್ಥಾನದಲ್ಲಿ ಇನ್ನೊಂದು ವ್ಯಂಜನ ಬರುವುದು. ಇದಕ್ಕೆ 'ಆದೇಶ ಸಂಧಿ' ಎಂದು ಕರೆಯುವರು.

ಉದಾ :- ಚಳಿ + ಕಾಲ = ಚಳಿಗಾಲ

ತಲೆ + ತೂಗು = ತಲೆದೂಗು.

ವ್ಯಂಜನ ಸಂಧಿಗಳಲ್ಲಿ ಗದಬ ಸಂಧಿ, ವಕಾರಾದೇಶ ಸಂಧಿ, ಜಚಫಕರಾದೇಶ ಸಂಧಿಗಳೆಂದು ಮೂರು ಪ್ರಕಾರಗಳಿವೆ.

**ಸಂಸ್ಕೃತ ಸಂಧಿ:-**

(1) **ಸವರ್ಣದೀರ್ಘ ಸಂಧಿ:**

ಸವರ್ಣ ಸ್ವರಗಳು ಒಂದರ ಮುಂದೆ ಒಂದು ಬಂದು ಸಂಧಿಯಾಗುವಾಗ ಅವೆರಡರ ಸ್ಥಾನದಲ್ಲಿ ಅದೇ ಜಾತಿಯ ದೀರ್ಘಸ್ವರವು ಆದೇಶವಾಗಿ ಬರುವುದು. ಇದಕ್ಕೆ ಸವರ್ಣದೀರ್ಘ ಸಂಧಿ ಎನ್ನುವರು.

ಉದಾ :- ನಂದಿ + ಈಶ = ನಂದೀಶ

ಮಹಾ + ಆತ್ಮ + ಮಹಾತ್ಮ

(2) **ಗುಣ ಸಂಧಿ:-**

ಅ, ಆ ಕಾರಗಳ ಮುಂದೆ ಇ, ಈ ಕಾರಗಳು ಬಂದಾಗ 'ಏ' ಕಾರ ಉ, ಊ ಕಾರಗಳು ಬಂದರೆ 'ಓ' ಕಾರವು, ಋ, ಕಾರ ಬಂದರೆ 'ಅರ್ ಆದೇಶವಾಗಿ ಬರುತ್ತದೆ. ಇದಕ್ಕೆ ಗುಣಸಂಧಿ ಎಂದು ಹೆಸರು.

ಉದಾ:- ಸೂರ್ಯ + ಉದಯ = ಸೂರ್ಯೋದಯ

ನಾಗ + ಇಂದ್ರ = ನಾಗೇಂದ್ರ

ಪಿತೃ + ರಿರ್ಜಿತ = ಪಿತ್ರಾರ್ಜಿತ

## ವಾಕ್ಯ ಪ್ರಯೋಗಗಳು

**ಕರ್ತರಿ ಪ್ರಯೋಗ:-**

ಕ್ರಿಯಾಪದವು ಕರ್ತೃಪದದ ಲಿಂಗ, ವಚನಗಳನ್ನು ಅನುಸರಿಸಿ ಪ್ರಯೋಗಗೊಂಡಿದ್ದರೆ ಅದನ್ನು ಕರ್ತರಿ ಪ್ರಯೋಗ ಎನ್ನುತ್ತಾರೆ.

ಉದಾ:- (1) ಹುಡುಗರು ಪ್ರವಾಸಕ್ಕೆ ಹೋದರು

(2) ನಾಯಿಯು ರೊಟ್ಟಿಯನ್ನು ತಿಂದಿತು.

**ಕರ್ಮಣಿ ಪ್ರಯೋಗ:-**

ಕನ್ನಡದಲ್ಲಿ ಸಹಜವಾಗಿ ಕರ್ಮಣಿ ಪ್ರಯೋಗವಿಲ್ಲ, ಅಲ್ ಪ್ರತ್ಯಯ ಸೇರಿದ ಭಾವಾರ್ಥಕ್ರಿಯೆಗೆ ಪಡು ಪ್ರತ್ಯಯ ಸೇರಿಸಿ ಈ ಪ್ರಯೋಗವನ್ನು ಕನ್ನಡದಲ್ಲಿ ತರಲು ಪ್ರಯತ್ನಿಸಲಾಗಿದೆ.



Get More Learning Materials Here : CLICK HERE www.studentbro.in

ಕರ್ಮಣಿ ಪ್ರಯೋಗದಲ್ಲಿ ಕರ್ಮಪದವು ಪ್ರಧಾನವಾಗಿರುತ್ತದೆ. ಕರ್ಮಪದವು ಪ್ರಥಮಾ ವಿಭಕ್ತಿ ಪ್ರತ್ಯಯದಲ್ಲಿಯ ಕರ್ತೃಪದವು ತೃತೀಯಾ ವಿಭಕ್ತಿ ಪ್ರತ್ಯಯದಲ್ಲಿರುತ್ತದೆ. ಕ್ರಿಯಾಪದವು ಕರ್ಮಪದದ ಲಿಂಗ, ವಚನಗಳನ್ನು ಅನುಸರಿಸಿ ಬಳಕೆಯಾಗುತ್ತದೆ.

ಉದಾ:- (1) ರೈತರಿಂದ ಬೆಳೆಯು ಬೆಳೆಯಲ್ಪಟ್ಟಿತು.

(2) ಯೋಧರಿಂದ ದೇಶವು ರಕ್ಷಿಸಲ್ಪಟ್ಟಿತು.

## ಲೇಖನ ಚಿಹ್ನೆಗಳು

| | | | |
|---|---|---|---|
| , | ಅಲ್ಪವಿರಾಮ | ^ | ಹಂಸಪಾದ |
| ; | ಅರ್ಧವಿರಾಮ | + | ಕಠಾರಿ ಚಿಹ್ನೆ |
| : | ವಿವರಣ ವಿರಾಮ | + | ಧನ ಚಿಹ್ನೆ |
| . | ವಿರಾಮ | - | ಋಣ ಚಿಹ್ನೆ |
| - | ಅಡ್ಡ ಗೀಟು | × | ಗುಣಾಕಾರ ಚಿಹ್ನೆ |
| ! | ಆಶ್ಚರ್ಯ ಸೂಚಕ | ÷ | ಭಾಗಾಕಾರ ಚಿಹ್ನೆ |
| ? | ಪ್ರಶ್ನಾರ್ಥಕ/ ಅನುಮಾನಸೂಚಕ | ? | ಏಕೆಂದರೆ |
| _ | ಕೊಡುಗೆರೆ (ಹೈಫನ್) | ∴ | ಆದ್ದರಿಂದ |
| ( ) | ಅಲ್ಪಾವರಣ | = | ಸಮ |
| { } | ಪುಷ್ಪಾವರಣ | > | ಹೆಚ್ಚು |
| [ ] | ದೀರ್ಘಾವರಣ | < | ಕಡಿಮೆ |
| ‘‘ ’’ | ಉದ್ಧರಣ | | |

## ಕೊಟ್ಟ ಅಂಶಗಳ ಆಧಾರದಿಂದ ಕಥೆ ರಚಿಸುವುದು.

(1) ಒಂದು ಕಾಡಿನಲ್ಲಿ ಹಲವಾರು ಪ್ರಾಣಿಗಳು ವಾಸ

(2) ವನರಾಜ ಸಿಂಹನಿಂದ ತೊಂದರೆ

(3) ಹಲವಾರು ಪ್ರಾಣಿಗಳು ಸಿಂಹಕ್ಕೆ ಬಲಿ

(4) ಎಲ್ಲ ಪ್ರಾಣಿಗಳ ಸಭೆ

(5) ಪ್ರತಿದಿನ ಒಂದೊಂದು ಪ್ರಾಣಿಯನ್ನು ಕಳಿಸಲು ನಿರ್ಧಾರ

(6) ಪ್ರತಿದಿನ ಒಂದು ಪ್ರಾಣಿಯ ಸರದಿ

(7) ಒಂದು ದಿನ ಮೊಲದ ಸರದಿ

(8) ತಡವಾಗಿ ಬಂದದ್ದು

(9) ಅದಕ್ಕಿಂತ ಬಲಿಷ್ಠ ಪ್ರಾಣಿಯನ್ನು ಬಾವಿಯಲ್ಲಿ ತೋರಿಸಿದ್ದು.

(10) ಅದು ಬಾವಿಗೆ ಬಿದ್ದು ಪ್ರಾಣಕಳೆದುಕೊಂಡದ್ದು.




Get More Learning Materials Here : CLICK HERE www.studentbro.in


## ಎಂಟನೆಯ ಇಯತ್ತೆ ಕನ್ನಡ ಸುಗಮಭಾರತಿ


| ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆ | ಅಧ್ಯಯನ ನಿಷ್ಪತ್ತಿ |
| --- | --- |
| ಮಕ್ಕಳಿಗೆ ವ್ಯಕ್ತಿಗತ ಅಥವಾ ಸಾಮಾಜಿಕ ಸ್ವರೂಪದಲ್ಲಿ ಪ್ರೋತ್ಸಾಹನೆ ಕೊಡುವುದಕ್ಕಾಗಿ ಅವರಿಗೆ-<br>• ನಮ್ಮ ಭಾಷೆಯಲ್ಲಿ ಮಾತನಾಡಲು, ಚರ್ಚೆ ಮಾಡಲು, ಓದಲು ಅವಕಾಶ ಒದಗಿಸುವುದು.<br>• ಪದ್ಯ ಹಾಗೂ ಪದ್ಯೇತರ ಸಾಹಿತ್ಯ ಒದಗಿಸುವದು.<br>• ಗೆಳೆಯರೊಂದಿಗೆ ಹಾಗೂ ಶಿಕ್ಷಕರೊಂದಿಗೆ ಓದಿದ, ಕೇಳಿದ ಸಾಹಿತ್ಯ ಕುರಿತು ಚರ್ಚೆ ಮಾಡಲು ಅವಕಾಶ ಕೊಡುವದು.<br>• ಕನ್ನಡ ಭಾಷೆಯ ಸೂಕ್ಷ್ಮತೆಯ ಮೇಲೆ ಚರ್ಚೆಕೂಟ ಆಯೋಜಿಸುವುದು.<br>• ಸಕ್ರೀಯ ಹಾಗೂ ಜಾಗರೂಕರಿರುವ ಸಲುವಾಗಿ ತಯಾರಿಸುವ ಸಾಹಿತ್ಯ (ಉದಾ. ವರ್ತಮಾನ ಪತ್ರ, ಪತ್ರಿಕೆ, ದೂರದರ್ಶನ, ಚಿತ್ರಪಟ ಇತ್ಯಾದಿ) ನೋಡುವ, ಕೇಳುವ, ಓದುವ ಅವಕಾಶ ಮಾಡಿಕೊಡುವದು.<br>• ಕಲ್ಪನಾಶಕ್ತಿಯ, ಸೃಜನಶೀಲತೆಯ ವಿಕಾಸ ಮಾಡುವ ಕ್ರಿಯೆ ಉದಾ: ನಿಬಂಧ ಸ್ಪರ್ಧೆ, ಹಾಡಿನ ಸ್ಪರ್ಧೆ, ಭಾಷಣ ಸ್ಪರ್ಧೆ ಇತ್ಯಾದಿಗಳನ್ನು ಆಯೋಜಿಸುವುದು.<br>• ಹಾಡು, ಕವಿತೆ, ಕಥೆ, ಸಂವಾದ ಇತ್ಯಾದಿಗಳನ್ನು ಪದ್ಯ ಹಾಗೂ ಪದ್ಯೇತರ ಸಾಹಿತ್ಯ ಓದಲು, ಕೇಳಲು ಅವಕಾಶ ಒದಗಿಸುವದು.<br>• ಭಾಷೆಯ ಸಮೃದ್ಧಿಗಾಗಿ ಬಾಲ ಸಾಹಿತ್ಯ (ಕಥೆ, ಕವಿತೆ ಸಂವಾದ ಇತ್ಯಾದಿ) ಸಂಗ್ರಹ ಮಾಡಲು ಪ್ರೋತ್ಸಾಹನೆ ನೀಡುವುದು, ಅವುಗಳನ್ನು ಸಾದರಪಡಿಸಲು ಅವಕಾಶ ನೀಡುವುದು.<br>• ಮಾತಾಡುವಾಗ ನಾಣ್ಣುಡಿ, ಸುಭಾಷಿತ, ಸುವಿಚಾರಗಳನ್ನು ಬಳಸಲು ಮಕ್ಕಳಿಗೆ ಪ್ರೇರಣೆ ನೀಡುವದು.<br>• ವಿವಿಧ ವ್ಯವಸಾಯಗಳನ್ನು ಮಾಡುವ ಕುಶಲ ಕಾರ್ಮಿಕರ ಉದಾ. ಕುಂಬಾರ, ಬಡಿಗ, ಸಿಂಪಿಗ ಇತ್ಯಾದಿ ಸಂದರ್ಶನದ ಆಯೋಜನೆ ಮಾಡುವದು, ಮಕ್ಕಳಿಗೆ ಬೇರೆ-ಬೇರೆ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡುವದು.<br>• ಹೊಸ-ಹೊಸ ಶಬ್ದಗಳ ಅರ್ಥ ತಿಳಿದುಕೊಳ್ಳಲು ಶಬ್ದಕೋಶ ಬಳಸುವ ಪದ್ಧತಿ ತಿಳಿಸಿಕೊಡುವದು. | 08.LA.01 ಶಾಲೆಯ ಹಾಗೂ ಶಾಲಾಬಾಹ್ಯ ಪರಿಸರದಲ್ಲಿ ಕನ್ನಡ ಭಾಷೆಯಲ್ಲಿ ಮಾತನಾಡುತ್ತಾನೆ.<br>08.LA.02 ಪದ್ಯ ಹಾಗೂ ಪದ್ಯೇತರ ಲಿಖಿತ ಸಾಹಿತ್ಯ ಓದುತ್ತಾನೆ ಹಾಗೂ ಓದಿದ ವಿಷಯ ಕುರಿತು ಚರ್ಚೆ ಮಾಡುತ್ತಾನೆ.<br>08.LA.03 ಆಲಿಸಿದ, ಓದಿದ, ನೋಡಿದ ಭಾಷೆ ವಿಷಯ ಕುರಿತು ಗೆಳೆಯರೊಂದಿಗೆ, ಶಿಕ್ಷಕರೊಂದಿಗೆ ಚರ್ಚೆ ಮಾಡುತ್ತಾನೆ, ಅಭಿಪ್ರಾಯ ವ್ಯಕ್ತಪಡಿಸುತ್ತಾನೆ.<br>08.LA.04 ಭಾಷೆಯ ಸೂಕ್ಷ್ಮತೆಗಳನ್ನು ವೈಶಿಷ್ಟ್ಯಗಳನ್ನು ತಿಳಿದುಕೊಳ್ಳುತ್ತಾನೆ. ಯೋಗ್ಯ ವಾಕ್ಯಗಳನ್ನು ರಚಿಸುತ್ತಾನೆ.<br>08.LA.05 ವಿವಿಧ ಮಾಧ್ಯಮಗಳ ಮುಖಾಂತರ (ವರ್ತಮಾನ ಪತ್ರ, ದೂರದರ್ಶನ, ಚಿತ್ರಪಟ ಇತ್ಯಾದಿ) ತನ್ನ ಭಾಷೆಯಲ್ಲಿಯ ಹೊಸ-ಹೊಸ ಮಾಹಿತಿ ಪಡೆಯುತ್ತಾನೆ. ಭಾಷಿಕ ಜ್ಞಾನ ಬೆಳೆಸಿಕೊಳ್ಳುತ್ತಾನೆ.<br>08.LA.06 ತಾನು ಓದಿದ, ನೋಡಿದ, ಕೇಳಿದ ಮಾಹಿತಿ/ಜ್ಞಾನದ ಉಪಯೋಗ ಮಾಡಿಕೊಂಡು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವನು, ವಿಚಾರಗಳನ್ನು ವ್ಯಕ್ತಪಡಿಸುವನು, ಹಾಗೂ ಇತರರ ವಿಚಾರಗಳನ್ನು ಆಲಿಸುವನು.<br>08.LA.07 ಪದ್ಯ ಹಾಗೂ ಪದ್ಯೇತರ ಹಾಡು, ಕವಿತೆ, ಸಂವಾದಗಳನ್ನು ತಿಳಿದುಕೊಂಡು ಓದುವನು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವನು.<br>08.LA.08 ಬಾಲಸಾಹಿತ್ಯ- ಕಥೆ, ಹಾಡು, ಸಂವಾದ ಇತ್ಯಾದಿಗಳನ್ನು ಸಂಗ್ರಹಿಸುತ್ತಾನೆ. ಓದಿ ಆನಂದ ಪಡೆಯುತ್ತಾನೆ. ಸಾದರಪಡಿಸುತ್ತಾನೆ.<br>08.LA.09 ದೂರದರ್ಶನ ವೃತ್ತಪತ್ರಿಕೆಗಳಲ್ಲಿಯ ಬಾಲಸಾಹಿತ್ಯ- ಕಥೆ, ಕವಿತೆ, ಸಂವಾದ ಓದಿ ಆನಂದ ಪಡೆಯುತ್ತಾನೆ.<br>08.LA.10 ಮಕ್ಕಳು ಮಾತಾಡುವಾಗ ಯೋಗ್ಯ ನಾಣ್ಣುಡಿ, ಸುಭಾಷಿತಗಳನ್ನು ಬಳಸುವರು. ಅಸ್ವಾದ ಪಡೆಯುವರು.<br>08.LA.11 ಸ್ವಂತದ ಅನುಭವಗಳನ್ನು ಸ್ವಂತದ ಭಾಷಾ ಶೈಲಿಯಲ್ಲಿ ಹೇಳುತ್ತಾನೆ, ಬರೆಯುತ್ತಾನೆ.<br>08.LA.12 ಮಕ್ಕಳು ವ್ಯವಸಾಯದ ಕುರಿತು ಬೇರೆ-ಬೇರೆ ಪ್ರಶ್ನೆಗಳನ್ನು ಕೇಳುವರು. ವ್ಯವಸಾಯಗಳ ಬಗ್ಗೆ ಮಾಹಿತಿ ಪಡೆಯುವರು.<br>08.LA.13 ಶಬ್ದಕೋಶದ ಮುಖಾಂತರ ಹೊಸ ಶಬ್ದಗಳ ಅರ್ಥಗಳನ್ನು ತಿಳಿದು ಕೊಳ್ಳುವನು. |

Get More Learning Materials Here : CLICK HERE www.studentbro.in






































- पाठ्यपुस्तक मंडळाची वैशिष्ट्यपूर्ण पाठ्येत्तर प्रकाशने.
- नामवंत लेखक, कवी, विचारवंत यांच्या साहित्याचा समावेश.
- शालेय स्तरावर पूरक वाचनासाठी उपयुक्त.

पुस्तक मागणीसाठी www.ebalbharati.in, www.balbharati.in संकेत स्थळावर भेट द्या.

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५

Get More Learning Materials Here : CLICK HERE www.studentbro.in



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ 411004.

कन्नड सुगमभारती इ. ८ वी

₹ 30.00

Get More Learning Materials Here : CLICK HERE www.studentbro.in